ಹೊರನಾಡ ಚಿಲುಮೆ

ಕಾಂಗರುನಾಡಿನ ಕನ್ನಡಿಗರಿಂದ ವಿಶ್ವ ಕನ್ನಡಿಗರ ಹೃದಯಕ್ಕೆ

ಆಸ್ಟ್ರೇಲಿಯಾದ ಮೊಟ್ಟಮೊದಲ ಕನ್ನಡ ಇ-ಮಾಸಪತ್ರಿಕೆ

Chilume Circulated in and around 10 countries

ಸಂಪುಟ ೪, ಸಂಚಿಕೆ ೮, ಜನವರಿ ೨೦೧೭

ನೂತನ ವರ್ಷದ ಶುಭ ಹಾರೈಕೆಗಳು

Find us on: facebook

ಹೊರನಾಡ ಚಿಲುಮೆ ಇ-ಮಾಸ ಪತ್ರಿಕೆಯ ಓದುಗರಿಗೆಂದು ತೆರೆಯಲಾಗಿರುವ ಫೇಸ್ಬುಕ್ ಗುಂಪು ಸೇರಿಕೊಳ್ಳಲು ಕೆಳಗಿನ ಲಿಂಕ್ ಕ್ಲಿಕ್ ಮಾಡಿ

JOIN CHILUME FACEBOOK GROUP (You have to be logged in to facebook to join)

ಚಿಲುಮೆಯ ಒಳಗೆ

ಸಂಪಾದಕೀಯ ... ಪು. ೧

ಸಿಡ್ನಿ ಸುದ್ದಿಗಳು ... ಪು. ೨

ಚಿಲುಮೆಯ ಒಳಗೆ

ಮಂಕುತಿಮ್ಮನ ಕಗ್ಗ ... ಪು. ೫

ರಾಂ ರಾಮ ... ಪು. ೬

ಚಿಲುಮೆಯ ಒಳಗೆ

ಕಥಾಚಿಲುಮೆ, ರೆಸಿಪಿ ... ಪು. ೯

ಕಾವ್ಯ ಚಿಲುಮೆ, ಹಾಸ್ಯ ಚಿಲುಮೆ ... ಪು. ೧೦

ಚಿಲುಮೆಯ ಒಳಗೆ

ಪದಪುಂಜ/ರಂಗೋಲಿ ... ಪು. ೧೧

ಚಿಲುಮೆಯ ಒಳಗೆ

ನೀವು ಮಾಡಿ ... ಪು. ೧೪

ಕನ್ನಡ ಕಥಾ ಲೋಕ

ಪುಟ ೧೨

ಸಂಪಾದಕೀಯ

ಬದರಿ
ತ್ಯಾಮಗೊಂಡ್ಲು

ಹೊಸತನ್ನು ಕಂಡಾಗ ಮನವು ಪುಳಕಿತಗೊಳ್ಳುವುದು ಸಹಜವಾದದ್ದು. ಆ ಹೊಸತನ ಪುನರಾವರ್ತನೆಯಾಗುತ್ತಾ ಬಂದಂತೆ ಪುಳಕಿತಗೊಳ್ಳುವುದೂ ಕಡಿಮೆಯಾಗುತ್ತಾ ಹೋಗುತ್ತದೆ. ದಿನವೂ ಬಿಡುವ ಮಲ್ಲಿಗೆಗೆ ಮನಸ್ಸು ಹರ್ಷಿತವಾಗುತ್ತದೆ ನಿಜ, ಆದರೆ ಪುಳಕಿತವಾಗುವುದು ಕಡಿಮೆ. ಆದರೆ ಹಿಂದಿನ ರಾತ್ರಿಯ ಆ ಗಾಢ ಕತ್ತಲನ್ನು ಸೀಳಿಕೊಂಡು, ಅನುದಿನವೂ ವಿಭಿನ್ನ ಅನುಭವ ಕೊಡುವ ಸೂರ್ಯೋದಯವನ್ನು ದಿನವೂ ನೋಡಿದರೂ ನಮ್ಮನ್ನು ಪುಳಕಿತರಾಗುವಂತೆ ಮಾಡುವುದರಲ್ಲಿ ಸೋಲುವುದಿಲ್ಲ. ಜಗವನ್ನು ಬೆಳಗುವ ಸೂರ್ಯನಿಗೆ ಆ ಶಕ್ತಿಯಿದೆ.

ಹೊಸ ವರ್ಷವು ಬಂದಿದೆ. ಹೊಸ ಹೊಸ ಕನಸುಗಳನ್ನು ನಮ್ಮಲ್ಲಿ ಬಿತ್ತರಿಸಿ, ಅವುಗಳನ್ನು ನನಸುಗಳನ್ನಾಗಿ ಮಾಡಿಕೊಳ್ಳಲು ವರ್ಷಪೂರ್ತಿಯ ಸಮಯವನ್ನು ನಮಗೆ ಕೊಡುತ್ತಿದೆ. ಇದರ ಸದುಪಯೋಗವನ್ನು ಮಾಡಿಕೊಳ್ಳುವುದು ನಮಗೆ ಬಿಟ್ಟ ವಿಚಾರ.

ಕನಸು ನನಸುಗಳ ವಿಚಾರದ ಹಿನ್ನಲೆಯಲ್ಲಿ, ಇಂದಿನ ಸಾಮಾಜಿಕ ಜಾಲತಾಣಗಳಲ್ಲಿ ಕನ್ನಡದ ಬಳಕೆಯ ಬಗ್ಗೆ ಹೇಳಲೇ ಬೇಕು. ಕನ್ನಡದ ಅಭಿಮಾನಿಗಳಾಗಿ ನಾವುಗಳೆಲ್ಲ ಕನ್ನಡವನ್ನು ಹೆಚ್ಚು ಹೆಚ್ಚು ಎಲ್ಲೆಡೆ ಕಾಣಬೇಕೆಂದು ಅಪೇಕ್ಷಿಸುವುದು ಒಂದು ಹೊಂಗನಸೇ ಸರಿ. ಇಂದಿನ ದಿನಗಳಲ್ಲಿ ಎಲ್ಲಿ ನೋಡಿದರೂ ಸಾಮಾಜಿಕ ಜಾಲತಾಣಗಳಾದ ಫೇಸ್ಬುಕ್, ವ್ಹಾಟ್ಸ್ಯಪ್ ಇತ್ಯಾದಿಗಳ ಉಪಯೋಗವೇ ಹೆಚ್ಚು. ಎಲ್ಲೆಡೆ ಕನ್ನಡವನ್ನು ಕಾಣಬಯಸುವ ನಮ್ಮ ಕನಸನ್ನು ನನಸಾಗಿಸಲು ಇದಕ್ಕಿಂತ ಸುಲಭ ಮಾಧ್ಯಮ ಬೇಕೇ?

ನಲ್ಮೆಯ ಓದುಗರಲ್ಲಿ ವಿನಮ್ರ ಆಗ್ರಹ. ನಿಮ್ಮದೇ ತಾಯ್ಮಾತಾದ ಕನ್ನಡವನ್ನು ಸಾಮಾಜಿಕ ಜಾಲತಾಣಗಳಲ್ಲಿ ಹೆಚ್ಚು ಹೆಚ್ಚು ಬಳಸಿ. ಕನ್ನಡಕ್ಕೆ ಸಂಬಂಧ ಪಟ್ಟ ಪುಸ್ತಕ ಪರಿಚಯ, ಹಾಡುಗಳು, ವ್ಯಕ್ತಿ, ಸ್ಥಳ ಪರಿಚಯ ಇತ್ಯಾದಿಗಳನ್ನು ಹಂಚಿಕೊಳ್ಳಿ. ಒಂದಷ್ಟು ಕನ್ನಡದ ನಗೆಹನಿಗಳನ್ನು ಹಂಚಿಕೊಂಡು ಎಲ್ಲರನ್ನೂ ನಗೆಗಡಲಲ್ಲಿ ತೇಲಿಸಿ. ಹೆಚ್ಚಿನ ಶ್ರಮವಿಲ್ಲದೆ ಕನ್ನಡವನ್ನು ಹರಡಿ, ಕನ್ನಡದ ಬಳಕೆಯ ಹೊಂಗನಸನ್ನು ಈ ವರ್ಷ ಪೂರ್ತಿ ನನಸಾಗಿಸೋಣ.

ಒಂದು ಎಚ್ಚರಿಕೆಯ ಮಾತನ್ನು ಹೇಳಲೇಬೇಕು. ಮುಖ ಕೊಟ್ಟು ಮಾತನಾಡುವುದು ಎಲ್ಲ ಕಾಲದಲ್ಲೂ ಶ್ರೇಷ್ಠ. ಸಾಮಾಜಿಕ ಜಾಲತಾಣವನ್ನು ಉಪಯೋಗಿಸುವ ಭರದಲ್ಲಿ, ನಾವು ಇತರರೊಂದಿಗೆ ಮಾತನಾಡುವುದನ್ನು ನಿಲ್ಲಿಸದಿರೋಣ. ಮೆಚ್ಚುಗೆಯ ಮಾತನ್ನು ಕಿವಿಯ ಮೂಲಕ ಕೇಳಿದರೇ ಚಂದ. ಹಾಗೆಯೇ ಮುನಿಸಿನ ಜಗಳವು ಮಾತುಕತೆಗಳ ಮೂಲಕ ಬಗೆಹರಿದರೇ ಒಳಿತು. ಮೊದಲ ಆದ್ಯತೆ ಮುಖತಃ ಅಥವ ಫೋನ್ ಮೂಲಕ ಮಾತನಾಡುವುದಕ್ಕೆ ಇರಲಿ. ನಂತರವಷ್ಟೇ ಫೇಸ್ಬುಕ್ ಬರಲಿ. ಇಲ್ಲದಿದ್ದರೆ ಫೇಸ್ಬುಕ್ ಮತ್ತೊಂದು ಕುರುಕ್ಷೇತ್ರವಾದೀತು.

ಮುನ್ನುಡಿಯಲ್ಲಿ ಹೇಳಿದಂತೆ, ನಮ್ಮ ನಡೆ, ನುಡಿ, ಭಾಷೆಯ ಪ್ರಯೋಗವು ದಿನವೂ ನಮ್ಮನ್ನು ಪುಳಕಿತರನ್ನಾಗಿಸುವ ಸೂರ್ಯನ ಬೆಳಕಿನಂತೆ ಸಮಾಜವನ್ನು ಬೆಳಗಲಿ. ಈ ವರ್ಷದುದ್ದಕ್ಕೂ ಆ ಹೊಂಬೆಳಕು ನಮ್ಮನ್ನು ಮುನ್ನಡೆಸಲಿ. ▪

ಎರಡು ತಿಂಗಳ ಪ್ರಮುಖ ದಿನಗಳು

ಜನವರಿ ಶ್ರೀ ದುರ್ಮುಖಿ ನಾಮ ಸಂವತ್ಸರ
ದಕ್ಷಿಣ/ಉತ್ತರಾಯಣ ಪುಷ್ಯ/ಮಾಘ ಮಾಸ

01 ಭಾ - ಆಂಗ್ಲ ಹೊಸ ವರ್ಷ
09 ಸೋ - ಪೌಷ ಪುತ್ರದ ಏಕಾದಶಿ
12 ಗು - ಪೌಷ ಹುಣ್ಣಿಮೆ
14 ಶ - ಮಕರ ಸಂಕ್ರಾಂತಿ,
ಉತ್ತರಾಯಣ ಪುಣ್ಯಕಾಲ ಆರಂಭ
15 ಭಾ - ಸಂಕಷ್ಟ ಚತುರ್ಥಿ
23 ಸೋ - ಷಟಿಲ ಏಕಾದಶಿ
28 ಶ - ಮೌನೀ ಅಮಾವಾಸ್ಯೆ
29 ಭಾ - ಮಾಘ ಮಾಸ ಆರಂಭ

ಫೆಬ್ರವರಿ, ಶ್ರೀ ಮನ್ಮಥ ನಾಮ ಸಂವತ್ಸರ, ಉತ್ತರಾಯಣ, ಹೇಮಂತ ಋತು,
ಮಾಘ/ಫಾಲ್ಗುಣ ಮಾಸ

01 ಬು - ವಸಂತ ಪಂಚಮಿ
03 ಶು – ರಥ ಸಪ್ತಮಿ
04 ಶ - ಭೀಮಾಷ್ಟಮಿ, 07 ಮಂ - ಜಯ ಏಕಾದಶಿ,
11 ಶ - ಮಾಘ ಪೂರ್ಣಿಮಾ
14 ಭಾ - ವ್ಯಾಲೆಂಟೈನ್ಸ್ ಡೇ / ಸಂಕಷ್ಟ ಚತುರ್ಥಿ
22 ಬು - ವಿಜಯ ಏಕಾದಶಿ
25 ಶ - ಮಹಾಶಿವರಾತ್ರಿ
26 ಭಾ - ಸೂರ್ಯ ಗ್ರಹಣ
27 ಸೋ - ಫಾಲ್ಗುಣ ಮಾಸ ಆರಂಭ

ಬೆಂಗಳೂರಿನಲ್ಲಿ ಸಂಭ್ರಮದ 21ನೇ ಹಾಸ್ಯೋತ್ಸವ

ಬೆಂಗಳೂರಿಗರಿಗೆ, ಹಾಗೂ ವಿಶ್ವದ ಅನೇಕರಿಗೆ ಡಿಸೆಂಬರ್ ಬಂತು ಎಂದರೆ ಸಂಭ್ರಮ. ಕ್ರಿಸ್‌ಮಸ್ ಕೆಲವರಿಗಾದರೆ ಹಾಸ್ಯೋತ್ಸವ ಹಲವರಿಗೆ. ಎಂದಿನ ವರ್ಷಗಳಂತೆ ಬೇಲೂರು ರಾಮಮೂರ್ತಿಯವರ ಉಸ್ತುವಾರಿಯಲ್ಲಿ ಈ ಬಾರಿ ವೈವಿಧ್ಯಮಯ ಹಾಸ್ಯೋತ್ಸವ ನಡೆಯಿತು. ಪ್ರತಿ ವರ್ಷವೂ ಚರ್ವಿತ ಚರ್ವಣವಾಗದಿರುವುದೇ ಈ ಹಾಸ್ಯೋತ್ಸವದ ವಿಶೇಷ. ಪ್ರತಿ ವರ್ಷ ಮಾತುಗಾರರು, ಕಲಾವಿದರು ಬದಲಾಗುತ್ತಾರೆ. ಈ ಬಾರಿ ಚಲನಚಿತ್ರರಂಗದ ಹಿರಿಯ ನಟರಾದ ಡಾ.ಶ್ರೀನಾಥ್, ರಮೇಶ್ ಭಟ್ ಇದ್ದುದು ವಿಶೇಷ. ಮತ್ತೊಂದು ವಿಶೇಷ ಎಂದರೆ ಹಿರಿಯ ನಿವೃತ್ತ ಪೋಲೀಸ್ ಅಧಿಕಾರಿ ಡಾ. ಡಿ.ವಿ. ಗುರುಪ್ರಸಾದ್ ಅವರ ಅನುಭವದ ಹಾಸ್ಯ, ಡಾ. ತಮಿಳ್ ಸೆಲ್ವಿ ಅವರಿಂದ ತಮಿಳು ಸಾಹಿತ್ಯದಲ್ಲಿ ಹಾಸ್ಯ, ಹೀಗೆ ವೈವಿಧ್ಯಮಯವಾಗಿ ನಡೆದ ಹಾಸ್ಯೋತ್ಸವದಲ್ಲಿ ಎಂದಿನಂತೆ ಜನಜಂಗುಳಿಯೇ ತುಂಬಿತ್ತು. ಈ ಬಾರಿ ಐಸ್ ಟಿವಿಯವರ ಸಹಕಾರದೊಂದಿಗೆ ಇಡೀ ವಿಶ್ವದಲ್ಲಿ ಬೆಂಗಳೂರಿನಲ್ಲಿ ನಡೆದ ಹಾಸ್ಯೋತ್ಸವವನ್ನು ನೋಡುವ ಸದವಕಾಶ ಸಿಕ್ಕಿತ್ತು.

ಪ್ರೊ. ಅ.ರಾ.ಮಿತ್ರ ಅವರು ಬರೆದಿರುವ ಹಾಲಿನವಳ ಲೆಕ್ಕ ಹಾಸ್ಯ ಲೇಖನವನ್ನು ಬೇಲೂರು ರಾಮಮೂರ್ತಿಯವರು ರಂಗರೂಪಾಂತರ ಮಾಡಿದ್ದು ಅದನ್ನು ಬೇಲೂರು ರಾಮಮೂರ್ತಿ ಮತ್ತು ರಾಜೇಶ್ವರಿಯವರು ಅಭಿನಯಿಸಿದರು.

ಇದೇ ಸಂದರ್ಭದಲ್ಲಿ ಬೇಲೂರು ರಾಮಮೂರ್ತಿಯವರು ಬರೆದಿರುವ ಹಾಸ್ಯ ನಾಟಕ ಬೊಂಬಾಟ್ ಬೀಚೆ ಕೂಡಾ ಬಿಡುಗಡೆಯಾಯಿತು. ▪

ಹೊಸ ವರ್ಷ ಜನವರಿ ೭ರಂದು ಸಿಡ್ನಿ ಸುಗಮ ಗಾನ ಸಮಾಜ ಎಲ್ಲ ಸದಸ್ಯರಿಗೂ ಹಾಡುವ ಅವಕಾಶ ದೊರಕಿಸಿಕೊಡಲು ಕ್ಯಾರೆಯೋಕೆ ರಸ ಸಂಜೆಯನ್ನು ಆಯೋಜಿಸಿತ್ತು. ಬೇಸಿಗೆಯ ರಜೆಯ ಕಾರಣ ಸಭಾಂಗಣ ಕಿಕ್ಕಿರಿದು ತುಂಬದಿದ್ದರೂ ತಕ್ಕಮಟ್ಟಿಗೆ ಜನ ಸೇರಿದ್ದರು. ಮುಖ್ಯ ಅತಿಥಿಗಳಿಂದ ದೀಪ ಬೆಳಗುವುದರೊಂದಿಗೆ ಆರಂಭಗೊಂಡ ಕಾರ್ಯಕ್ರಮ ಪುಟ್ಟ ಬಾಲೆ ಕು || ಸಮನ ಹಾಡಿದ "ನಿಂಬೀಯಾ ಬನಾದ ಮ್ಯಾಗಳ" ಜಾನಪದ ಹಾಡು ಸರಸ್ವತಿ ದೇವಿಯ ಹಾಡಿನೊಂದಿಗೆ ಮೊದಲ ಹಾಡು ಸೊಗಸಾಗಿ ಮೂಡಿಬಂದಿತು. ಶ್ರೀಮತಿ ಜಯಂತಿ ಅವರು ನಂತರ "ಅಣ್ಣ ನಿನ್ನ ಸೋದರಿಯ" ಹಳೆಯ ಚಿತ್ರದ ಹಾಡು ನಂತರ ಶ್ರೀಮತಿ ಜಾಹಿದಾ ಮತ್ತು ಅತಿಕ್ ಅವರ "ಕಳ್ಳಿ ಇವಳು" ಹಾಡು ಶ್ರೀ ವಿಜೇಂದ್ರ ಹಾಡಿದ " ನೋ ಪ್ರಾಬ್ಲಮ್" ಹಾಡುಗಳು ಹೊಸ-ಹಳೆಯ ಸಂಗೀತದ ವಿಭಿನ್ನ ಅನುಭವ ತಂದಿತು. ಕುಮಾರಿಯರಾದ ಸಿಂಧು ಉಪಾಸನೆ ಚಿತ್ರದ "ಭಾವವೆಂಬ ಹೂವು ಅರಳಿ" ಹಾಡಿದರೆ, ನಿರೀಕ್ಷ " ಗಗನವೇ ಬಾಗಿ" ಸಂಜು ವೆಡ್ಸ್ ಗೀತಾ ಚಿತ್ರದಿಂದ ಸೊಗಸಾಗಿ ಹಾಡಿದರು. ಎಂದೆಂದಿಗೂ ಮರೆಯದ ಗಂಧದ ಗುಡಿ ಚಿತ್ರದ ಹಾಡು "ನಾವಾಡುವ ನುಡಿಯೇ " ಹಾಡಿದವರು ಅತಿಕ್ ಅಹಮದ್. ಕನ್ನಡ ಚಿತ್ರರಂಗದಲ್ಲಿ ದಾಖಲೆ ಮಾಡಿದ ಮುಂಗಾರು ಮಳೆ ಚಿತ್ರದ "ಅನಿಸುತಿದೆ" ಹಾಡನ್ನು ಸೊಗಸಾಗಿ ಹಾಡಿದವರು ಶಂಕರ್ ಮಧ್ಯಸ್ಥ. ಸಿಡ್ನಿಯ ಖ್ಯಾತ ಗಾಯಕ ಶ್ರೀನಿವಾಸನ್ "ಗೀತಾಂಜಲಿ" ಸಿ ಬಿ ಐ ಶಂಕರ್ ಚಿತ್ರದಿಂದ ಆರಿಸಿದ ಹಾಡು ತುಂಬಾ ಚೆನ್ನಾಗಿ ಮೂಡಿಬಂದಿತು.

ಕಾರ್ಯಕ್ರಮದಲ್ಲಿ ಮುಂದೆ ಸುಗಮ ಗಾನ ಸಮಾಜದ ವೇದಿಕೆಗೆ ನಾಲ್ಕು ಹೊಸ ಗಾಯಕರ ಪರಿಚಯವಾಯಿತು. "ಉಸಿರೇ ಉಸಿರೇ" ಹಾಡನ್ನು ಹಾಡಿದ ಶ್ರೀ ಆದರ್ಶ್ , ಹೊಸಬೆಳಕು ಚಿತ್ರದ ಟೈಟಲ್ ಸಾಂಗ್ ಹಾಡಿದ ಶ್ರೀ ರಾಜೀವ್, ಬೆಳ್ಳಿ ಮೋಡ ಚಿತ್ರದ "ಮೂಡಲ ಮನೆಯ" ಹಾಡಿದ ಶ್ರೀಮತಿ ಸೌಮ್ಯ ಹಾಗು ಗೆಜ್ಜೆ ಪೂಜೆ ಚಿತ್ರದ "ಗಗನವು ಎಲ್ಲೋ"ಹಾಡಿದ ಶ್ರೀಮತಿ ಶಾಲಿನಿ ಎಲ್ಲರೂ ಭರವಸೆಯ ಗಾಯಕರೆನಿಸಿದರು. ನಂತರ ಕೆಲನಿಮಿಷಗಳ ಕಾಲ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಶ್ರೀಮತಿ ಶಾಂತಾ ಎಸ್ ಶೆಟ್ಟಿ ಗಾಯಕರಿಗೆ ಕೆಲವು ಸಲಹೆಗಳನ್ನು ನೀಡಿ ತಮ್ಮ ಅನುಭವದ ಹಂಚಿಕೊಂಡರು. ಅದಾದ ಬಳಿಕ ಅವರಿಗೆ ಶ್ರೀಮತಿ ಅನು ಶಿವರಾಂ ಅವರ ಮೂಲಕ ಸಮಿತಿಯ ಸದಸ್ಯರು ಅಭಿನಂದನಾ ಪತ್ರವನ್ನು ಕೊಟ್ಟು ಸನ್ಮಾನಿಸಿದರು. ವಂದನಾರ್ಪಣೆ ಮಾಡುವ ಕೆಲಸ ನನ್ನದೇ ಆಗಿತ್ತು.

ಮುಂದೆ ಪ್ರಸ್ತುತ ಪಡಿಸಿದ ಮೂರು ಚಿತ್ರಗೀತೆಗಳು ಪ್ರೇಕ್ಷಕರ ಚಪಾಳೆ ಹರ್ಷೋದ್ಗಾರಕ್ಕೆ ಎಡೆ ಮಾಡಿತು. ರಾಜೇಶ್ ಹೆಗ್ಗಡೆಯವರ ಎರಡು ಹಾಡುಗಳ ಮಿಶ್ರಿತ ಗೀತೆ ಮಧುರವಾಗಿತ್ತು. ಶ್ರೀ ಚೇತನ್ ಹಾಡಿದ "ಖಾಲಿ ಕ್ವಾಟರ್ ಬಾಟಲ್ " ಶಿಳ್ಳೆ ಚಪ್ಪಾಳೆಗಳ ಸುರಿ ಮಳೆ ಗಿಟ್ಟಿಸಿತು. ಮತ್ತೆ ಹಾಡಲು ವೇದಿಕೆಗೆ ಬಂದವರು ಶ್ರೀಯುತ ಶ್ರೀನಿವಾಸನ್ ಮಾನಸ ಸರೋವರ ಚಿತ್ರದ "ನೀನೇ ಸಾಕಿದಾ ಗಿಣಿ" ಗಾಡಿ ಕಾರ್ಯಕ್ರಮ ಗುಣಮಟ್ಟವನ್ನು ಉತ್ತುಂಗಕ್ಕೇರಿಸಿದರು. ಇನ್ನು ಕಡೆಯದಾಗಿ ಶ್ರೀಮತಿ ಜಯಂತಿ ಮತ್ತು ಶ್ರೀಮತಿ ಶಾಂತಾ ಎಸ್ ಶೆಟ್ಟಿ ಅವರು ನೀನಡೆವ ಹಾದಿಯಲ್ಲಿ ಹಾಡನ್ನುಮಧುರವಾಗಿ ಹಾಡಿ ಮುಗಿಸಿದರು. ರುಚಿಕರ ಬಟಾಣಿ ಪಲಾವ್, ಕುರ್ಮಾ ಮತ್ತು ಮೊಸರನ್ನ ಹೊರಾಂಗಣದಲ್ಲಿ ಬಡಿಸಲಾಯಿತು ಎಲ್ಲರೂ ಸವಿದು ಮನೆಗಳಿಗೆ ತೆರಳಿದರೆ ಕೆಲವು ಹಾಡುಗಳ ಗುಂಗು ಹಾಗೇ ಮನದಲ್ಲಿ ಉಳಿದಿತ್ತು. ▪

ಕನ್ನಡ ಕ್ಯಾರಿಯೋಕೆ ಸಮಾರಂಭದ ಛಾಯಾ ಚಿತ್ರಗಳು ಮುಂದಿನ ಪುಟದಲ್ಲಿ

ನೀವೂ ಜಾಹೀರಾತು ನೀಡಲು ಬಯಸುವಿರಾದರೆ ನಮಗೆ ಇ-ಮೇಲ್ ಮಾಡಿ: horanadachilume@gmail.com

Contact Mr Sudheendra Rao EMAIL
Mobile 0415 291 723

Contact Mr.Sathya Bhat EMAIL
Mobile 0412 918 511

Contact Mr Umesh EMAIL
Mobile 0401 034 456

Contact Mr Eranna Gotyal EMAIL
Mobile 0404 215 605

ಕನ್ನಡ ಕ್ಯಾರಿಯೋಕೆ ಸಮಾರಂಭದ ಛಾಯಾ ಚಿತ್ರಗಳು



ದೇವರೆಂಬುದದೇನು ಕಗ್ಗತ್ತಲ ಗವಿಯೆ? |
ನಾವರಿಯಲಾರದೆಲ್ಲದರೊಟ್ಟು ಹೆಸರೇ? ||
ಕಾವನೂರ್ವನಿರಲ್ಕೆ ಜಗದ ಕಥೆಯೇಕಿಂತು? |
ಸಾವು ಹುಟ್ಟುಗಳೇನು?-ಮಂಕುತಿಮ್ಮ ||

ದೇವರೆಂಬುದದೇನು = ದೇವರು + ಎಂಬುದದೇನು,
ನಾವರಿಯಲಾರದೆಲ್ಲದರೊಟ್ಟು = ನಾವು + ಅರಿಯಲಾರದ + ಎಲ್ಲದರ + ಒಟ್ಟು,
ಕಾವನೂರ್ವನಿರಲ್ಕೆ= ಕಾವನು + ಓರ್ವನು + ಇರಲ್ಕೆ, ಕಥೆಯೇಕಿಂತು = ಕಥೆಯು + ಏಕೆ + ಇಂತು, ಕಾವನು = ಕಾಯುವವನು, ಓರ್ವನು = ಒಬ್ಬನು, ಇರಲ್ಕೆ= ಇರಲು, ಏಕಿಂತು = ಏಕೆ ಹೀಗೆ.

ದೇವರು ಎನ್ನುವುದು ಏನು? ಅದೇನು ಕತ್ತಲು ಕವಿದ ಗವಿಯೆ? ನಾವು ಅರಿಯಲಾಗದ ಎಲ್ಲದರ ಒಟ್ಟು ಹೆಸರೇ? ಕಾಯುವವನು ಒಬ್ಬ ಇರಲು, ಈ ಜಗದ ಕಥೆಯು ಏಕೆ ಇನಿತು? ಹುಟ್ಟು ಸಾವುಗಳರ್ಥವೇನು? ಎನ್ನುತ್ತಾರೆ ಮಾನನೀಯ ಗುಂಡಪ್ಪನವರು.

ದೇವರೇನು ಅಷ್ಟೊಂದು ಗಹನನೆ? ಗುಹ್ಯನೆ? ಅರ್ಥವಾಗದವನೇ? ದೇವರು ಗಹನನೇ ಅಲ್ಲವೇ ಗೊತ್ತಿಲ್ಲ. ಆದರೆ ಇಂದಿಗೂ "ಅದು, ಇದೇ"ಎಂದು ಹೇಳುವ ಒಂದು ಪ್ರಮಾಣ ಸಿಕ್ಕಿಲ್ಲ ಅಲ್ಲವೆ? ಸಿಕ್ಕಿದ್ದಿದ್ದರೆ ಆ ದೇವರ ರೂಪ ಮತ್ತು ಸ್ವರೂಪಗಳ ಬಗ್ಗೆ ಇಷ್ಟೊಂದು ಭಿನ್ನ ಭಿನ್ನ ಅಭಿಪ್ರಾಯಗಳು ಇರುತ್ತಿರಲಿಲ್ಲ ಅಲ್ಲವೆ? ದೇವರನ್ನು ಪರಿಭಾಷಿಸಿದವರೆಲ್ಲ ತಮ್ಮ ತಮ್ಮ ಅನುಭವದ ವೃತ್ತದಲ್ಲೇ ಆ ದೇವರನ್ನು ವಿವರಿಸಿದ್ದಾರೆ. ಅಂದರೆ ಆ ದೇವರು ಎನ್ನುವ ವಸ್ತು ಅನುಭವ ವೇದ್ಯ ಮಾತ್ರ.

ಈ ದೇವರು ಎಂಬುದು ಏನು? ಮಾನವನಿಗೆ ಯೋಚಿಸುವ ಶಕ್ತಿ ಬಂದಾಗಿನಿಂದ ಇದೊಂದು ಕಾಡುವ ಪ್ರಶ್ನೆ. ಅಂದು ಮನುಷ್ಯ ಕಾಡಿನಲ್ಲಿ ಅಲೆಮಾರಿಯಾಗಿದ್ದ. ಕೈಗೆ ಸಿಕ್ಕಿದ್ದನ್ನು ತಿಂದು, ತನ್ನನ್ನು ತಾನು ರಕ್ಷಿಸಿಕೊಳ್ಳಲು ಹೋರಾಡುತ್ತಿದ್ದ. ಆಗ ಅವನಿಗೆ ಬಂದ ಯೋಚನೆ ಹೀಗಿದ್ದಿರಬಹುದು. ದಿನದ ಯಾವುದೋ ಸಮಯದಲ್ಲಿ ಒಂದು ವಸ್ತು ಗಗನದಲ್ಲಿ ಬರುತ್ತದೆ. ಆಗ ಎಲ್ಲವೂ ನಿಚ್ಚಳವಾಗಿ ಕಾಣುತ್ತದೆ. ಕಾಡು ಪ್ರಾಣಿಗಳಿಂದ ತನ್ನನ್ನು ತಾನು ರಕ್ಷಿಸಿಕೊಳ್ಳಲು ಸಹಾಯವಾಗುತ್ತದೆ. ಆಹಾರವನ್ನು ಹುಡುಕಲು ಆಡುವ ಬೇಟೆಯೂ ಯಶಸ್ವಿಯಾಗುತ್ತದೆ. ಆದರೆ ದಿನದ ಯಾವುದೋ ಸಮಯದಲ್ಲಿ ಗಗನದಲ್ಲಿ ಆ ವಸ್ತು ಕಾಣೆಯಾಗುತ್ತದೆ. ಆಗ ಎಲ್ಲವೂ ಕತ್ತಲೆ. ಕಾಡು ಪ್ರಾಣಿಗಳಿಂದ ತನ್ನ ರಕ್ಷಣೆ ಕಷ್ಟ ಅಥವಾ ಅಸಾಧ್ಯ. ಹಾಗಾಗಿ ಗಗನದಲ್ಲಿ ಬರುವ ವಸ್ತು ತನಗೆ ಸಹಾಯ ಮಾಡುತ್ತದೆ. ಆಕಾಶದಿಂದ ನೀರು ಬೀಳುತ್ತದೆ. ಗಿಡಮರಗಳು ಚಿಗುರಿ ಗೆಡ್ಡೆ ಗೆಣಸುಗಳು, ಹಣ್ಣು ಹಂಪಲುಗಳು ಯಥೇಚ್ಛವಾಗಿ ಆಹಾರ ರೂಪದಲ್ಲಿ ಸಿಗುತ್ತದೆ. ಹಾಗೆ ಗಗನದಿಂದ ಬಂದ ಮಳೆ ತನಗೆ ಸಹಾಯಮಾಡುತ್ತದೆ. ಎಲ್ಲವೂ ಮೇಲಿಂದ ಬರುವುದರಿಂದ, ಇದನ್ನೆಲ್ಲಾ ಕೊಡುವ ಅಥವಾ ಕಳುಹಿಸುವ ಯಾರೋ ಮೇಲಿರಬೇಕು. ಅದನ್ನೇ ಅಂದು ಅವನು "ದೇವರು" ಎಂದ. ಮುಂದೆ ತನಗೆ ಉಪಯೋಗಕ್ಕೆ ಬರುವ ಎಲ್ಲಕ್ಕೂ ಆ ದೈವತ್ವವನ್ನು ಆರೋಪಿಸುತ್ತಾ ಹೋದ. ವಿಡಂಬನೆಯೇನೆಂದರೆ ಇಂದಿಗೂ ಮಾನವನ ಸ್ಥಿತಿ ಹಾಗೇ ಇದೆ. ತನಗೆ ಉಪಯೋಗಕ್ಕೆ ಬರುವುದೆಲ್ಲಾ, ಅಂದರೆ ಭೂಮಿ, ಮನುಷ್ಯ, ಪ್ರಾಣಿ, ಪಕ್ಷಿ, ಗಿಡ, ಮರ, ನದಿ, ಸಮುದ್ರ, ಮಳೆ, ಬಿಸಿಲು, ಬೆಳಕು, ಹೂವು, ಹಣ್ಣು ಹೀಗೆ ಎಲ್ಲವೂ ಅವನಿಗೆ ದೈವ ಸಮಾನ. ಆದರೂ ಇಂದಿಗೂ ಮಾನವನಿಗೆ ಆ 'ದೇವರ' ಖಚಿತ ಸ್ವರೂಪ ಅರ್ಥವಾಗಿಯೇ ಇಲ್ಲ.

ಈ ಜಗತ್ತಿನ ಅಥವಾ ಸೃಷ್ಟಿಯಲ್ಲಿ ನಡೆಯುವ ವಿದ್ಯಮಾನಗಳನ್ನೆಲ್ಲ ನಡೆಸುವವನು ದೇವರೆಂದು ನಾವು ಹೇಳುತ್ತೇವೆ. ಆದರೆ, ಅದರ ನಿಜ ಸ್ವರೂಪ ಏನು ಎಂದು ಇಂದಿಗೂ ಮಾನವ ಅಥೈಸಲಾಗಿಲ್ಲ. ವಿಜ್ಞಾನದ ಮೂಲಕ ಅವನು ಕಂಡು ಹಿಡಿದುಕೊಂಡಿರುವುದು, ಕೋಟಿಯಲ್ಲಿ ಒಂದು ಪಾಲೂ ಇಲ್ಲ. ಅಷ್ಟೇ ಅಲ್ಲ ನಿರಂತರ ಬದಲಾಗುತ್ತ ಹೊಸ ಹೊಸ ಆಯಾಮವನ್ನು ತಳೆಯುವ ಈ ದೇವರನ್ನು ವಿಜ್ಞಾನದ ಪ್ರಯೋಗಗಳಿಂದ ಅರಿಯಲು ಸಾಧ್ಯವೇ? ಹಾಗಾಗಿ ಅವನು "ಗುಹ್ಯ"ನು ಎನ್ನುವ ಅರ್ಥದಲ್ಲಿ ಮಾನ್ಯ ಗುಂಡಪ್ಪನವರು ಹೇಳುತ್ತಾರೆ.

ಹಾಗೆ ಆ ದೇವರು ಈ ಪ್ರಪಂಚವನ್ನು ಮತ್ತು ಇಲ್ಲಿರುವ ಎಲ್ಲವನ್ನೂ ಸೃಷ್ಟಿಸಿ ಎಲ್ಲರನ್ನೂ ಕಾಪಾಡುವವನಾಗಿದ್ದರೆ, ಎಲ್ಲರೂ ಸಮಾನವಾಗಿ ಸುಖವಾಗಿರಬೇಕಲ್ಲವೆ? ಈ ಹುಟ್ಟು ಸಾವುಗಳೇಕೆ?ನೋವು ದುಃಖಗಳೇಕೆ ? ಮನುಷ್ಯ ಮನುಷ್ಯರಲ್ಲಿ ಇಷ್ಟೊಂದು ಬೇಧವೇಕೆ? ಆ ದೇವರು ಎಲ್ಲರನ್ನೂ ಕಾಯುವವನಾದರೆ ಎಲ್ಲರನ್ನೂ ಸಮಾನವಾಗಿ ಕಾಯಬೇಕಲ್ಲವೇ? ಈ ಸಾವು ನೋವುಗಳಿಗೇನು ಅರ್ಥ? ಹೀಗೆ ಹತ್ತು ಹಲವಾರು ಪ್ರಶ್ನೆಗಳನ್ನು ಈ ಮುಕ್ತಕದ ಮೂಲಕ ಮಾನನೀಯ ಗುಂಡಪ್ಪನವರು ಎತ್ತಿದ್ದಾರೆ. ಇಂತಹ ಪ್ರಶ್ನೆಗಳು ಸಾಮಾನ್ಯವಾಗಿ ಎಲ್ಲರಲ್ಲೂ ಅವರವರ ಜೀವನದ ಯಾವುದಾದರೂ ಘಳಿಗೆಯಲ್ಲಿ ಉದ್ಭವಿಸಿರಬಹುದು. ▪

ರಾಂ ರಾಮ

ಇದು ಹಾಸ್ಯ ಪುಟ

ಶ್ರೀ ರಾಮನಾಥ್ ಅವರು ಉತ್ತರಿಸುವ "ನೀವು ಕೇಳಿದಿರಿ" ಬ್ಲಾಗ್ನಲ್ಲಿ ಲಭ್ಯ. ಕೆಳಗಿನ ಲಿಂಕ್ ಕ್ಲಿಕ್ ಮಾಡಿ

ನೀವು ಕೇಳಿದಿರಿ

ರಾಮನಾಥ್
ಭಾಷಣಕಾರರು, ಹಾಸ್ಯ ಲೇಖಕರು

ಎನಿ ಸಜೆಷನ್ಸ್.....?

ಅಫ್ರಿಡಿಯ ಚಿತ್ರ ಇರುವ ಟಿಶರ್ಟ್ ಹಾಕಿಕೊಂಡವನನ್ನು ಅರೆಸ್ಟ್ ಮಾಡಿದರೆಂಬ ಸುದ್ದಿ ಕೇಳಿ ಟಿಶರ್ಟ್ ಮೇಲೆ ಯಾವ ಚಿತ್ರ ಇದ್ದರೆ ತೊಂದರೆಯಾಗದೆಂದು ನಿರ್ಧರಿಸಲು ಪಿ.ಟಿ.ಎಂ. (ಪಿಕ್ಚರ್ ಟೀಶರ್ಟ್ ಮ್ಯಾನುಫಾಕ್ಚರರ್ಸ್) ಅಸೋಸಿಯೇಷನ್ ಸಭೆ ಸೇರಿತ್ತು.

'ವಿರಾಟ ಕೊಯ್ಲಿಯ ಚಿತ್ರ ಆಗಬಹುದೆ?' ಕ್ರಿಕೆಟ್ ಪ್ರೇಮಿಯೊಬ್ಬ ಕೇಳಿದ.

'ಊಹೂಂ. ಅನುಷ್ಕಾ ಶರ್ಮಾ ಫ್ಯಾನ್ ಕ್ಲಬ್ ಇದಕ್ಕೆ ತೀವ್ರ ವಿರೋಧ ವ್ಯಕ್ತಪಡಿಸುತ್ತದೆ. ದೇಶವಿದೇಶ ಸುತ್ತಿ, ಒಟ್ಟಿಗೆ ಕಾಲ ಕಳೆದು, ಮದುವೆಯಾಗಲಿಲ್ಲವಾದ್ದರಿಂದ ಅಖಿಲ ಕರ್ನಾಟಕ ಭಗ್ನಹೃದಯಿಗಳ ಸಂಘವೂ ಇದನ್ನು ವಿರೋಧಿಸುತ್ತದೆ' ನುಡಿದ ಪಿಟಿಎಮ್‌ನ ಚಿತ್ರಪ್ರೇಮಿ ಕಮ್ ವಿಫಲಪ್ರೇಮಿ ಕಾರ್ಯದರ್ಶಿ ಮೋರಿಯೋ.

'ರವಿಚಂದ್ರನ್ ಅಶ್ವಿನ್?'

'ತಮಿಳುನಾಡಿನವನು. ಪಕ್ಕಾ ಕನ್ನಡಿಗನಿಗೆ ಆ ಟೀಶರ್ಟ್ ಕಂಡರೆ ಕಾವೇರಿ ನೆನಪಾಗಿ ಟಿಶರ್ಟ್ ಹಿಡಿದು ಜಗ್ಗಾಡುವ ಪರಿಸ್ಥಿತಿ ಬಂದೀತು.'

'ಶಿಖರ್ ಧಾವನ್?'

'ಸದ್ಯಕ್ಕೆ ಶಿಖರದಿಂದ ಕೆಳಕ್ಕೆ ಧಾವಿಸಿದ್ದಾರೆ. ಏರಿದಾಗ ನೋಡೋಣ'

'ಕ್ರಿಕೆಟ್‌ನವರೇ ಬೇಡ. ಸಾನಿಯಾ ಮಿರ್ಜಾ?'

'ಊಹೂಂ. ಆಕೆಯ ಮೂಗುಬೊಟ್ಟು ಇಂಡಿಯಾದು, ಸ್ಕರ್ಟ್ ಇಂಡಿಯಾದು, ಟೆನಿಸ್ ರ್ಯಾಕೆಟ್ ಪಾಕಿಸ್ತಾನದ್ದು. ಅಫ್ರಿಡಿಯಂತೆ ಅವಳೂ ಪಾಕಿಸ್ತಾನಿ ಎಂದು ಯಾರಾದರೂ ತೀರ್ಮಾನಿಸಿಬಿಟ್ಟರೆ ತೊಟ್ಟವರು ಅರೆಸ್ಟ್ ಆದಾರು'

'ಸಾಕ್ಷಿ ಮಲ್ಲಿಕ್?'

'ಊಹೂಂ. ಸಾಕ್ಷಿಯ ಚಿತ್ರವಿರುವ ಟಿಶರ್ಟ್ ಹಾಕ್ಕೊಂಡ ಹುಡುಗೀರನ್ನ ಕಂಡ್ರೆ ಹುಡುಗರು 'ಯಾರೋ ಫೈಟರ್ರು ಮಚ್ಚಾ' ಅಂತ ಜಾಗ ಖಾಲಿ ಮಾಡ್ತಾರೆ. ಸೇಲ್ಸ್ ಡೌನ್ ಆಗತ್ತೆ'

'ಪಿ.ವಿ. ಸಿಂಧು?'

'ಗುಡ್ ಚಾಯ್ಸ್. ಒಪ್ಪಬಹುದು' ಎಂದರು ಅಧ್ಯಕ್ಷರು.

'ಆಗದು. ಸಿಂಧುವಿನ ಚಿತ್ರ ಕಂಡಾಗಲೆಲ್ಲ ಚೆನ್ನವೇ ಜ್ಞಾಪಕಕ್ಕೆ ಬರುತ್ತದೆ. ಸರ್ಕಾರ ಐನೂರು ಗ್ರಾಂಗಿಂತ ಚಿನ್ನ ಹೊಂದುವಂತಿಲ್ಲ ಎಂದಿರುವಾಗ ಪದೇ ಪದೇ ಚಿನ್ನ ಜ್ಞಾಪಿಸುವುದು ಸಮಾಜದ್ರೋಹವಾದೀತು' ಎಂದನೊಬ್ಬ ಬುದ್ಧಿಜೀವಿ.

'ಅಭಿನವ್ ಬಿಂದ್ರಾ?'

"ಛಿ! ಗುರಿಯಿಲ್ಲದೆ ಅಲೆಯುವ ಹುಡಗರು ಗುರಿಯಿಡುವವನ ಚಿತ್ರ ಧರಿಸಿದರೆ ಆತನಿಗೆ ಅವಮಾನ ಮಾಡಿದಂತಾಗುತ್ತದೆ'

'ಸರಿ. ಆಟಗಾರರೇ ಬೇಡ. ಮೈಕಲ್ ಜಾಕ್ಸನ್?'

'ಆಗಲ್ಲ. ರೋಡ್ ವಾಕೇ ಕಷ್ಟ ಆಗಿರೋ ದೇಶದಲ್ಲಿ ಮೂನ್ ವಾಕ್ ಮಾಡೋವ್ನ ಫೋಟೋ ಸರಿಹೋಗಲ್ಲ'

'ಸಲ್ಮಾನ್ ಖಾನ್?'

'ರ್ಯಾಶ್ ಡ್ರೈವಿಂಗ್ ಮಾಡೋವ್ರನ್ನ ಸಪೋರ್ಟ್ ಮಾಡ್ತಾರೆ ಅಂತ ಈ ಟಿಶರ್ಟ್ ಧರಿಸಿದವರಿಗೆ ಆರ್ಟಿಓ ಲೈಸೆನ್ಸ್ ಕೊಡಲ್ಲ'

'ಅಮೀರ್ ಖಾನ್?'

'ದೇಹದ ದೃಷ್ಟಿಯಿಂದ ಓಕೆ. ದೇಶದ ದೃಷ್ಟಿಯಿಂದ ಅಲ್ಲ'

'ಯಾಕೆ?'

'ಮುಖ ನೋಡಿದ ತಕ್ಷಣ ಅಸಹಿಷ್ಣುತೆ ಉಂಟಾಗಿ ಮನೆಯವರು ದೇಶ ಬಿಟ್ಟುಹೋಗುವ ಮಾತನಾಡಬಹುದು'

'ಮಲ್ಲಿಕಾ ಶೆರಾವತ್?'

'ಬೇಡ. ಚಪಲದ ಮುದುಕರು ಮನೆಯಲ್ಲಿದ್ದರೆ ಅಡಗಿಸಿಟ್ಟುಕೊಂಡು ನೋಡ್ತಾ ಕೂತ್ಬಿಡ್ತಾರೆ. ತೊಗೊಂಡ ಟೀನೇಜರ್ಸ್‌ಗೇ ಸಿಗದ ಹಾಗಾಗ್ಬಿಡತ್ತೆ'

'ಸನ್ನಿ ಲಯೋನ್?'

'ಸನ್ನಿ ಲಿಯೋನ್ ಚಿತ್ರ ಹಾಕಿದರೆ ಆ ಟಿಶರ್ಟ್ ಕೊಂಡವರಿಗೆ ಒಂದು ಶಾಲು ಫ್ರೀ ಕೊಡಬೇಕಾಗತ್ತೆ'

'ಯಾಕೆ?'

ಮುಂದಿನ ಪುಟ ನೋಡಿ ...

‘ದೊಡ್ಡವರ ಮುಂದೆ ಸನ್ನಿ ಚಿತ್ರ ಕಾಣುವಂತಿದ್ದರೆ ಇಬ್ಬರಿಗೂ ಮುಜುಗರ!’

‘ಕಾರ್ಟೂನ್ ಕ್ಯಾರೆಕ್ಟರ್ಗಳ ಚಿತ್ರ ಹಾಕಿದರೆ? ಫಾರ್ ಎಕ್ಸಾಂಪಲ್ ಮಿಕಿ ಮೌಸ್?’

‘ಬಹುಸಂಖ್ಯಾತವಾದ ಇಲಿ ಅಲ್ಪಸಂಖ್ಯಾತವಾದ ಬೆಕ್ಕನ್ನು ಅಟ್ಟಿಸಿಕೊಂಡುಹೋಗುವುದನ್ನು ಅಲ್ಪಸಂಖ್ಯಾತರ ಸಂಘ ಖಂಡಿಸಿ ಟಿಶರ್ಟ್ ಬ್ಯಾನ್ ಆಗತ್ತೆ’

‘ಬ್ಯಾಟ್‌ಮ್ಯಾನ್?’

‘ಮುಗ್ಧ ಮಕ್ಕಳು ಹಾರಹೋಗಿ ಪ್ರಾಣ ಕಳೆದುಕೊಳ್ಳುವುದಕ್ಕೆ ಈ ಕಂಪನಿಯೇ ಕಾರಣ ಅಂತ ಕೇಸ್ ಬರೋ ಸಾಧ್ಯತೆ ಇದೆ’

‘ರಾಜಕಾರಣಿಗಳ ಚಿತ್ರ ಹಾಕಿದರೆ? ಫಾರ್ ಎಕ್ಸಾಂಪಲ್ ಮೋದಿ’

‘ವಾಹ್! ಟೀಶರ್ಟ್ ಮೇಲೆ ಟೀ ಮಾರಿದವರ ಚಿತ್ರ. ಸೂಪರ್’ ಎಂದ ಕಾರ್ಯದರ್ಶಿ

‘ಷಟಪ್. ನೋಟು ನಿಷೇಧಿಸಿದವರ ನೋಟವನ್ನ ಜನ ನಿಷೇಧಿಸಿಬಿಟ್ಟರೆ ನಮ್ಮ ಗತಿ?’ ಕಳವಳದಿಂದ ನುಡಿದರು ಅಧ್ಯಕ್ಷರು.

‘ಕೇಜ್ರೀವಾಲ್?’

‘ಚಿತ್ರದ ಕೆಳಗೆ ಡುಂಡಿರಾಜರ ಸ್ಲೋಗನ್ ಬರೆಯಲು ಪರ್ಮಿಷನ್ ಸಿಕ್ಕರೆ ಪರವಾಗಿಲ್ಲ’

‘ಏನದು ಸ್ಲೋಗನ್?’

‘ಪೆಹಲೆ ಬೋಲ್ನೇದೋ ಹಮ್‌ಕೋ; ಬಾದ್‌ಮೇ ಎಷ್ಟು ಬೇಕೋ ಕೆಮ್ಕೋ ಅಂತ. ಕೇಜ್ರೀವಾಲ್ ಕೆಮ್ಮಿನ ಸರದಾರರಲ್ಲವೆ!’

‘ಡುಂಡಿರಾಜ್ ಒಪ್ಪಿಯಾರೇನು?’

‘ಡೌಟು. ಕೇಜ್ರಿಯವರ ಚಿತ್ರದ ಜೊತೆಜೊತೆಗೇ ಅವರ ಪಕ್ಷದ ಸಿಂಬಲ್ ಆದ ಪೊರಕೆ ಇರತ್ತಲ್ಲ, ಇದು ಆ ಸ್ಲೋಗನ್ ಮೇಲೆ ಬರತ್ತೆ. ಹಾಸ್ಯಬರಹಗಾರರೇ ಆಗಲಿ, ಯಾರೇ ಆಗಲಿ, ಅವರ ಸ್ಲೋಗನ್ ಮೇಲೆ ಪೊರಕೆ ಆಡಿಸೋದನ್ನ ಯಾರೂ ಇಷ್ಟ ಪಡಲ್ಲ’

‘ರಾಹುಲ?’

‘ಸಾರ್ವಜನಿಕರ ಹಿತದೃಷ್ಟಿಯಿಂದ ಒಳ್ಳೆಯದಲ್ಲ’ ಹೇಳಿದ ಹ್ಯೂಮನ್ ರಿಸೋರ್ಸಸ್ ವಿಂಗ್‌ನ ಮುಖ್ಯಸ್ಥ

‘ಏಕೆ?’

‘ಆ ಮುಖ ಕಂಡತಕ್ಷಣ ಜನರ ಹೊಟ್ಟೆಯಲ್ಲಿ ಹುಣ್ಣಾಗುತ್ತದೆ’

‘ಓಹ್! ಏಕೆ?’

‘ನಕ್ಕೂ ನಕ್ಕೂ. ಆತ ದೇಶದ ಅತ್ಯುತ್ತಮ ಕಮೆಡಿಯನ್’

‘ಟೂ ಇನ್ ಒನ್‌ಗಳದು ಹಾಕಿದರೆ ಹೇಗೆ?’ ಮಾರ್ಕೆಟಿಂಗ್ ವಿಂಗ್‌ನ ಮಾರಿಮುತ್ತು ಕೇಳಿದ

‘ಅಂದರೆ?’

‘ಅಂಬರೀಷ್. ಅವರು ನಟರೂ ಹೌದು, ರಾಜಕಾರಣಿಯೂ ಹೌದು’

‘ಕೃಷ್ಣ ಕೃಷ್ಣಾ... ರಮ್ಯವಾದ ಯೋಚನೆ. ಆದರೆ ನಾಟ್ ಪಾಸಿಬಲ್ಲು’

‘ಯಾಕೆ?’

‘ಅವರು ದಾನಕ್ಕೆ ಹೆಸರಾದವರು. ಈಗಿನವರು ದಾನ ಎಂದರೆ ನಿಧಾನ ಅಂತಾರೆ. ಜೊತೆಗೆ ನೋಟೇ ಇಲ್ಲದಿರೋವಾಗ ಡೊನೇಟೆಲ್ಲಾಡೋದು!’

‘ರಮ್ಯ?’

‘ಅವರ ಚಿತ್ರಕ್ಕಿಂತ ಅವರ ಸ್ಲೋಗನ್‌ಗಳನ್ನ ಹಾಕಬಹುದು. ಒಂದೊಂದೂ ನಗೆಬಾಂಬ್‌ಗಳೇ... ಸ್ಲೋಗನ್ ವಿಷಯ ಬಂದಾಗ ಜ್ಞಾಪಿಸಿ’ ವಿನಂತಿಸಿಕೊಂಡರು ಕಾರ್ಯದರ್ಶಿ

‘ನನ್ನದೊಂದು ಸಜೆಷನ್’ ಹೇಳಿದ ಟಿಶರ್ಟ್ ಡಿಸೈನರ್ ವರ್ಣೇಶ ‘ಚಿತ್ರಗಳೇ ಬೇಡ. ಪ್ಲೇಯ್ನ್ ಆಗೇ ಇರಲಿ’

‘ಗುಡ್ ಐಡಿಯ. ಕಲರ್ಸು?’

‘ಡಿಸ್ಕಸ್ ಮಾಡೋಣ. ರೆಡ್?’

‘ನಮ್ಮದು ಸಂಪ್ರದಾಯಬದ್ಧ ರಾಜ್ಯ. ಕಮ್ಯುನಿಷ್ಟ್ ಕಲರ್ಗೆ ಧಿಕ್ಕಾರ’

‘ಗುಲಾಬಿ?’

‘ಹುಷ್! ಪ್ರೇಮದ ಸಂಕೇತ. ಕರ್ಮಠರು ಬ್ಯಾನ್ ಮಾಡಿಸಿಬಿಟ್ಟರೆ ಲಾಸ್ ಆಗುತ್ತದೆ’

‘ಗ್ರೀನ್?’

ಮುಂದಿನ ಪುಟ ನೋಡಿ ...

‘ಎಲ್ಲೆಲ್ಲೂ ಬರ ಇದ್ದು, ಹಸಿರೇ ಇಲ್ಲದಿರುವಾಗ ಗ್ರೀನ್ ಹಾಕೋದು ಸರ್ಕಾರದ ಲೇವಡಿ ಮಾಡಿದ ಹಾಗೆ ಆಗತ್ತೇಂತ ಅಭಿಪ್ರಾಯ ಇದೆ. ಪರಿಸ್ಥಿತಿ ಇಂಪ್ರೂವ್ ಆದಾಗ ನೋಡೋಣ’

‘ಪಿಂಕ್?’

‘ಆ ಬಣ್ಣದ ಹೆಸರೆತ್ತಬೇಡ. ಪಿಂಕ್ ನೋಟ್ ಬಂದಾಗಿನಿಂದಲೇ ನನ್ನೆಲ್ಲ ಆಸ್ತಿ ಹೋಗಿದ್ದು’ ಪಾರ್ಟ್‌ನರೊಬ್ಬ ನರಳಿದ.

‘ಬ್ಲೂ?’

‘ಬೇಡ. ಆ ಬಣ್ಣ ನೋಡಿದಾಗಲೆಲ್ಲ ರಾಸಲೀಲಾ ಪ್ರವೀಣರಾದ ಅಬ್ಕಾರಿ ಸಚಿವರು ಜ್ಞಾಪಕಕ್ಕೆ ಬರ್ತಾರೆ’

‘ಹಳದಿ?’

‘ಬೇಡ. ಡೈ ಮಾಡೋವಾಗ ಸ್ವಲ್ಪ ವ್ಯತ್ಯಾಸ ಆದರೂ ವಾನಪ್ರಸ್ಥದ ಬಣ್ಣ ಬಂದುಬಿಡತ್ತೆ’ ಎಂದ ಪ್ರೊಡಕ್ಷನ್ ಯುನಿಟ್‌ನ ರಂಗಯ್ಯ..

‘ಕೇಸರಿ?’

‘ಸಾಧ್ಯವೇ ಇಲ್ಲ. ಕೇಸರೀಕರಣ ಆಗಕೂಡದು ಅಂತ ರಾಜ್ಯದಲ್ಲಿ ಇನ್ನುಮುಂದೆ ಕೇಸರಿಬಾತ್, ಕೇಸರ್‌ಬಾದಾಮ್ ಕುಲ್ಫಿ, ಅಲ್ಲದೆ ಬಾಣಂತಿಯರಿಗೆ ಕೊಡುವ ಕೇಸರಿ ಕೂಡ ಬ್ಯಾನ್ ಮಾಡುವ ಯೋಚನೆ ಇದೆಯಂತೆ. ಪಂಚಾಂಗಗಳಲ್ಲೂ ಗಜಕೇಸರಿ ಯೋಗ ಎನ್ನುವುದರ ಬದಲು ಗಜ ಯೋಗ ಎಂದೇ ಹಾಕಲಾಗುವುದಂತೆ. ವೀರಕೇಸರಿ ಎಂಬ ಹಳೆಯ ಚಿತ್ರದ ಹೆಸರನ್ನೂ ಕೇಸರಿ ತೆಗೆದು ವೀರ ಎಂದು ಬದಲಾಯಿಸುವ ಯೋಚನೆ ಇದೆಯಂತೆ’

‘ಕಪ್ಪು?’

‘ಹಮಾರೇ ದೇಸ್ ಮೇ ಜೋ ಭೀ ಕಾಲಾ ಹೈ ಉಸೇ ನಿಕಾಲ್‌ನಾ ಚಾಹೀಯೇ ಅಂದಿದಾರೆ ಪ್ರಧಾನಿಗಳು. ಕಪ್ಪು ಟಿಶರ್ಟ್ ಡಾಲ್‌ನಾ ನಹೀ, ನಿಕಾಲ್‌ನಾ ಹೈ’ ವಿವರಿಸಿದರು ಸಭೆಯ ಪ್ರೆಸ್ ಅಡ್ವೈಸರ್

‘ವೈಟ್?’

‘ಕರೆಕರೆ ಸಂಸಾರದಲ್ಲಿ ವೈಟ್‌ಗೆ ಉಳಿಗಾಲವಿಲ್ಲ. ಮನೆಯಿಂದ ಹೊರಟಾಗ ವೈಟ್ ಇರುವುದು ರಿಂಗ್ ರೋಡ್‌ನಲ್ಲಿ ಧಾವಿಸಿದರೆ ಬೂದು, ದಟ್ಟ ಬೂದು, ಕಪ್ಪುಬಣ್ಣಕ್ಕೆ ತಿರುಗುತ್ತದೆ. ನೋ ವೈಟ್’

ದಾರಿ ಕಾಣದಾಗಿದೆ ಟಿಶರ್ಟ್ ಮಂದಿಗೆ.

ಎನಿ ಸಜೆಷನ್ಸ್.....? ▪

ಕನ್ನಡದಲ್ಲಿ ಟೈಪ್ ಮಾಡೋದು ಹೇಗೆ

ಹೊರನಾಡ ಚಿಲುಮೆ - ಸೆಪ್ಟೆಂಬರ್ ೨೦೧೩ ರ ಸಂಚಿಕೆಯಲ್ಲಿ google input tools ಉಪಯೋಗಿಸಿ ಕನ್ನಡದಲ್ಲಿ ಹೇಗೆ ಟೈಪ್ ಮಾಡಬಹುದು ಎಂದು ತಿಳಿದು ಕೊಂಡಿರಿ.

ಪೂರ್ಣ ಮಾಹಿತಿಗೆ ಸೆಪ್ಟೆಂಬರ್ ೨೦೧೩ ರ ಸಂಚಿಕೆಯನ್ನು ನೋಡಲು ಈ ಲಿಂಕ್ ಕ್ಲಿಕ್ ಮಾಡಿ.

ಸಂಕ್ಷಿಪ್ತ ಮಾಹಿತಿ ಇಲ್ಲಿದೆ

ಗೂಗಲ್ ಇನ್ಪುಟ್ ಟೂಲ್ಸ್ (Google input tools) ಯೂನಿಕೋಡ್ ಆಧಾರಿತ ಒಂದು ತಂತ್ರಾಂಶ. ಇದನ್ನು ನಿಮ್ಮ ಕಂಪ್ಯೂಟರ್ ನಲ್ಲಿ install ಮಾಡಿದರೆ ಕನ್ನಡದಲ್ಲಿ ನೀವು ನೇರವಾಗಿ word, excel ಇತ್ಯಾದಿ office ಸಾಫ್ಟ್ವೇರ್ ಅಲ್ಲದೆ, ಸಮಾಜ ತಾಣಗಳಾದ ಫೇಸ್ಬುಕ್ , ಜಿ-ಪ್ಲಸ್ ಇತ್ಯಾದಿಗಳಲ್ಲೂ ಟೈಪ್ ಮಾಡಬಹುದು.

INSTALL ಮಾಡುವ ಮತ್ತು ಉಪಯೋಗಿಸುವ ವಿಧಾನ

1. http://www.google.com/inputtools/windows/index.html - ಈ ಲಿಂಕ್ ಕ್ಲಿಕ್ ಮಾಡಿ

   ಇರುವ ಹಲವಾರು ಭಾಷೆಗಳ ಲಿಸ್ಟ್ ನಲ್ಲಿ ಕನ್ನಡ ಕ್ಲಿಕ್ ಮಾಡಿ install ಮಾಡಿ.

ಆಂಗ್ಲ ಭಾಷೆಯಲ್ಲಿ ಟೈಪ್ ಮಾಡುತ್ತಿದ್ದಾಗ ಕನ್ನಡ ಟೈಪ್ ಮಾಡಲು ಒಟ್ಟಿಗೆ CTRL + G ಕೀ ಒತ್ತಿ. ಆಗ ಆಂಗ್ಲದಿಂದ ಕನ್ನಡಕ್ಕೆ ಕೀಲಿಮಣೆ ಸಿದ್ಧವಾಗುತ್ತದೆ. ನಂತರ ನೀವು ಮತ್ತೆ ಆಂಗ್ಲ ಪದ ಬಳಸಬೇಕಾದರೆ ಮತ್ತೆ CTRL + G ಕೀ ಒಟ್ಟಿಗೆ ಒತ್ತಿ.

ಸೂಚನೆ: ಕೆಲವೊಮ್ಮೆ ಈ ಬಾಕ್ಸ್ ಕಾಣಿಸದಿದ್ದರೆ ಒಟ್ಟಿಗೆ ALT + SHIFT ಕೀ ಒತ್ತಿ

ಪ್ರೀತಿ - ತ್ಯಾಗ

ಕನಕಾಪುರ ನಾರಾಯಣ

ಬಡ ಕುಟುಂಬದಲ್ಲಿ ಮೂರು ಜನ. ಗಂಡ, ಹೆಂಡತಿ ಒಂದು ಹೆಣ್ಣು ಮಗು. ಕಷ್ಟಪಟ್ಟು ಒಬ್ಬಳೇ ಮಗಳನ್ನು ಶಾಲೆಗೆ ಕಳುಹಿಸುತ್ತಿದ್ದರು ಆ ಬಡ ದಂಪತಿಗಳು. ಆಕೆ ಶಾಲೆಯಲ್ಲಿ ಅತ್ಯುತ್ತಮ ಅಂಕಿ ಪಡೆದು ಉತ್ತೀರ್ಣಳಾದಳು. ತಂದೆಗೆ ಖುಷಿಯಾಗಿ ಮಗಳಿಗೆ ಏನು ಬೇಕು ಎಂದು ಕೇಳಲು ಆಕೆ "ಅಪ್ಪ ನನಗೆ ಒಂದು ಒಳ್ಳೆಯ ಉಡುಪು ಬೇಕು ಆದರೆ ಅದು ೧೫೦೦ರೂ ಆಗುತ್ತದೆ" ಎಂದಳು. ತಂದೆ ಹೇಗೋ ಮಾಡಿ ಅದನ್ನು ತಂದು ಕೊಟ್ಟನು. ಆಕೆಗೆ ಆನಂದವಾಯಿತು.

ಅವಳ ತಾಯಿಗೆ ಇಷ್ಟು ಹಣ ಎಲ್ಲಿಂದ ಬಂದಿತು ಎಂದು ತನ್ನ ಗಂಡನನ್ನು ಗುಪ್ತವಾಗಿ ಕೇಳಲು ಆತ ತನ್ನ ರಕ್ತದಾನ ಮಾಡಿದ್ದು ತಿಳಿಯಿತು. ಮಗಳು ಮೆಡಿಕಲ್ ಸೇರಿ ಮುಗಿಸಿದಾಗ ತಂದೆಯ ಬಳಿ ಬಂದು "ಅಪ್ಪಾ ನನ್ನ ವಿದ್ಯಾಭ್ಯಾಸ ಮುಗಿದಿದೆ, ಈಗ ಒಂದು ಪರೀಕ್ಷೆಗೆ ದೆಹಲಿಗೆ ಹೋಗಿ ಬರಬೇಕು, ಸುಮಾರು ಎಂಟು ಸಾವಿರ ರೂ ಬೇಕಿದೆ" ಎಂದಳು. ಕೂಡಲೇ ತಂದೆ ಆಗಲಿ ಮಗು ಎಂದು ಎರಡೇ ದಿನಗಳಲ್ಲಿ ಹಣ ಹೊಂದಿಸಿ ಕೊಟ್ಟ. ತಾಯಿ ಮತ್ತೆ ಆತನನ್ನು ಗುಪ್ತವಾಗಿ ಕೇಳಲು ಆತ ತನ್ನ ಮೂತ್ರಪಿಂಡವನ್ನೇ ದಾನ ಮಾಡಿದ್ದು ತಿಳಿಯಿತು. ದೆಹಲಿಯಿಂದ ಹಿಂತಿರುಗಿ ನಂತರ ಮಗಳು ದೊಡ್ಡ ಡಾಕ್ಟರ್ ಆಗುತ್ತಾಳೆ, ಇನ್ನು ತಮ್ಮೆಲ್ಲಾ ಕಷ್ಟಗಳೂ ಇಂಗಿತು ಎಂದು ಅವಳ ಬರುವಿಕೆಗೆ ಕಾಯುತ್ತಿದ್ದರು ಆ ಬಡ ದಂಪತಿಗಳು. ಆದರೆ ಬಂದದ್ದು ಅವಳ ಸಾವಿನ ಸುದ್ದಿ. ಪ್ರೀತಿಸಿದ ಪ್ರಿಯಕರನಿಂದ ಮೋಸಹೋದ ಕಾರಣ ಆಕೆ ಆತ್ಮಹತ್ಯೆ ಮಾಡಿಕೊಂಡಿದ್ದಳು. ಹಾಗಾದ್ರೆ ನಿಜವಾಗಿಯೂ ಸತ್ತವರು ಯಾರು? ಪ್ರೀತಿಯೋ ತ್ಯಾಗವೋ ▪

ಖರ್ಜೂರದ ಪಾನಕ

ಬೇಕಾಗುವ ಸಾಮಗ್ರಿಗಳು

- ಬೀಜ ತೆಗೆದ ಖರ್ಜೂರ ಎರಡು ಲೋಟ
- ಹುಣಸೇ ಹಣ್ಣಿನ ರಸ ಟೀ ಚಮಚ
- ಉಪ್ಪು ಚಿಟಿಕೆ
- ಸಿಹಿಗೆ ಸಕ್ಕರೆ 4 ಚಮಚ

ಮಾಡುವ ವಿಧಾನ

- ಖರ್ಜೂರ ನುಣ್ಣಗೆ ರುಬ್ಬಿ ಹುಣಸೇ ರಸ ಸೇರಿಸಿ ಚೆನ್ನಾಗಿ ಕಲಕಿ
- 2 ಲೋಟ ನೀರಿನೊಂದಿಗೆ ಸಕ್ಕರೆ, ಉಪ್ಪು ಸೆರಿಸಿ ಕಲಸಿ
- ಬೇಕಿದ್ದಲ್ಲಿ ಖಾರಕ್ಕೆ ಚಿಟಿಕೆ ಮೆಣಸು ಪುಡಿ ಹಾಕಿ
- ** ಶಕ್ತಿವರ್ಧಕ ಪಾನಕವಿದು

ಇನ್ನೂ ನೂರಾರು ರೆಸಿಪ್ಪಿಗಳಿಗೆ **www.sugamakannada.com** ಗೆ ಭೇಟಿಕೊಡಿ.

ರೆಸಿಪಿ ಕೊಡ್ತೀರಾ!

ಒಗಟು

೧. ಹೊಕ್ಕುವಾಗ ಒಂದು ಹೊರಟಾಗ ನೂರು

೨. ಮಡಿಸಿದರೆ ಮೊಗ್ಗಲ್ಲೋ,! ಬಿಡಿಸಿದರೆ ಹೂವಲ್ಲೋ, ಪರಿಮಳವಿಲ್ಲ ವಾಸ್ನೆ ಇಲ್ವಲ್ಲೋ

ಉತ್ತರಕ್ಕೆ ಪುಟ ೧೦ ನೋಡಿ

ಅಲ್ಲಿರುವನವನೊಬ್ಬನು ...

ಬಲ್ಲೆ ಎನ್ನುವನೊಬ್ಬ
ಲಲ್ಲೆ ಹೊಡೆಯುವನೊಬ್ಬ
ಸೊಲ್ಲಯಿಲ್ಲದೆ ನಿಂತ ಇನ್ನೊಬ್ಬನು

ಕೊಡು ದಾನಿಯು ಒಬ್ಬ
ಕಡು ಕೃಪಣನೊಬ್ಬ
ಕಡ ತಿರುಗಿಸದಿರುವವನಿನ್ನೊಬ್ಬನು

ಭೋಗದಲಿಹನೊಬ್ಬ
ಯೋಗದಲಿಹನೊಬ್ಬ
ರೋಗರುಜಿನದಲ್ಲಿಹನು ಇನ್ನೊಬ್ಬನು

ದೇವನೆನುತಿಹನೊಬ್ಬ
ಭಾವವೆನುತಿಹನೊಬ್ಬ
ಸಾವಕಾಯುತಿಹನಿನ್ನೊಬ್ಬನು

ಪ್ರಕೃತಿ ಎನ್ನುವನೊಬ್ಬ
ವಿಕೃತಿ ಎನ್ನುವನೊಬ್ಬ
ಸುಕೃತಿಯನೆ ಕಾಣುತಿಹನಿನ್ನೊಬ್ಬನು

ದಾಹ ಎನುತಿಹನೊಬ್ಬ
ದೇಹಿ ಎನುತಿಹನೊಬ್ಬ
ಮೋಹದೊಳಗಿಳಿದಿಹನು ಇನ್ನೊಬ್ಬನು

ಹಬ್ಬ ಮಾಡುವನೊಬ್ಬ
ಕಬ್ಬ ಬರೆಯುವನೊಬ್ಬ
ಹುಬ್ಬನೇರಿಸುವವನಿನ್ನೊಬ್ಬನು

ಬಲ್ಲಿದವನವನೊಬ್ಬ
ಅಲ್ಲಿರುವವನೊಬ್ಬ
ಎಲ್ಲೆಲ್ಲು ಇರುವವನವನೊಬ್ಬನು

-ಮಾಲು, ಅಡಿಲೈಡ್

ಜಾಣ ಕರ್ನಾಟಕ

೧. ಬೆಂಗಳೂರು ಸಮೀಪವಿರುವ ಈ ಬೆಟ್ಟವು ಒಂದೊಂದು ದಿಕ್ಕಿನಿಂದ ಒಂದೊಂದು ಆಕಾರವಾಗಿ ಕಾಣುತ್ತದೆ. ಆ ಬೆಟ್ಟವಾವುದು. ವಿವಿಧ ದಿಕ್ಕಿನಿಂದ ಕಾಣುವ ಆಕಾರಗಳೇನು.

೨. ಈ ಬೆಟ್ಟಕ್ಕೂ, ಒಂದು ರಾಜಮನೆತನಕ್ಕೂ ನಂಟಿದೆ. ಅದು ಏನು.

ಸರಿ ಉತ್ತರಕ್ಕೆ ಪುಟ ೧೪ ನೋಡಿ

ಒಗಟು – ಉತ್ತರ

೧. ಶ್ಯಾವಿಗೆ ೨. ಕೊಡೆ

ಹಾಸ್ಯ ಚಿಲುಮೆ

ನ್ಯಾಯಾಧೀಶ: ಹೋಗೀ ಹೋಗೀ ದೇವಸ್ಥಾನಕ್ಕೇ ಕನ್ನ ಹಾಕಿದ್ಯಲ್ಲಯ್ಯಾ?

ಕಳ್ಳ: ಅಂಗಲ್ಲ ಸಾಮೀ, ಯಾವ್ದಾದ್ರೂ ಕೆಲ್ಸ ಸುರು ಮಾಡೋವಾಗ ದೇವ್ರಿಂದಾ ತಾನೇ ಸುರು ಅಚ್ಕೋಬೇಕೂ?

ಮತ್ತಷ್ಟು ಹಾಸ್ಯಕ್ಕೆ ಭೇಟಿ ಕೊಡಿ – ಸುಗಮ ಕನ್ನಡ ಕೂಟ

ಪದ-ಪುಂಜ (ಶಾನೆ ತಲೆ ಕೆಡಿಸ್ಕೋಬೇಡಿ)

ಕೆಳಕಂಡ ವಾಕ್ಯಕ್ಕೆ ಅರ್ಥಬರುವಂತೆ ಬಿಟ್ಟ ಜಾಗ ತುಂಬುವ ಹಾಗೆ ಉತ್ತರ ಹುಡುಕಿ

೧. ಬಂಡೆಗವಿಗಳ ದೇವಾಲಯ ತಿನ್ನಲು ಬಲುರುಚಿ

೨. ಬರಬೇಡವೆಂದರೂ ಬರುವ ಇರುಳ ಹಕ್ಕಿ

೩.ಇನ್ನೂ ಗರಿಮೂಡದೆ, ಹಾರಲಾಗದ ಹಕ್ಕಿ

೪. ಶಾಸ್ತ್ರ ಹೇಳುವವನ ಕೈಯಲ್ಲಿರುವುದು

೫. ಹಾಗಿದ್ದಾಗಲೇ ಬಗ್ಗಿಸಬೇಕಿತ್ತು

೬. ನಾರಾಯಣನ ಅವತಾರವೇನಲ್ಲ.
ಕನ್ನಡದ ಮತ್ತೊಬ್ಬ ಮೇರುನಟ

ಉತ್ತರ: ಬನ್ನಿರೆಂದು ಕರೆಯುವ ಕರ್ನಾಟಕದ
ಪ್ರಸಿದ್ಧ ಗಿರಿಧಾಮ

ನಿಮ್ಮ ಉತ್ತರ ಇಮೇಲ್ ಮಾಡಿ, (horanadachilume@gmail.com)
ಜನವರಿ ೩೧ ತಮ್ಮ ಉತ್ತರ ಕಳುಹಿಸಲು ಕಡೆಯ ದಿನಾಂಕ.

ಡಿಸೆಂಬರ್ ಪದ ಪುಂಜ – ಉತ್ತರ

ಕಳೆದ ತಿಂಗಳ ಪದ ಪುಂಜಕ್ಕೆ ಸರಿಯಾಗಿ ಉತ್ತರಿಸಿದವರು

- ಸುಮ ಅಶೋಕ್, ಸಿದ್ದಿ
- ರಾಘವೇಂದ್ರ ಮೂರ್ತಿ, ಬೆಂಗಳೂರು
- ಕೆ. ಎಸ್. ಮಂಜುನಾಥ್, ಬೆಂಗಳೂರು
- ಪುಷ್ಪವಲ್ಲಿ ಚಂದ್ರಶೇಖರ್, ಬೆಂಗಳೂರು
- ಅನು ಶಿವರಾಮ್, ಸಿದ್ದಿ

ಡಿಸೆಂಬರ್ ತಿಂಗಳ ಪದಪುಂಜದ ಉತ್ತರ

೧. ದನ ಕಾಯುವವನೇ ದೈತ್ಯನ ಸೊಕ್ಕನ್ನು ಅಡಗಿಸಿದ.

ದ	ಮ	ನ

೨. ಕಾಯಲು ಹೋಗುತ್ತಿದ್ದವನನ್ನು ತಬ್ಬಿಬ್ಬುಗೊಳಿಸಿದ ಎರಡಾದ ದಾರಿ.

ಕ	ವ	ಲು

೩. ಎಲ್ಲರಂಥಹ ವ್ಯಕ್ತಿಯಲ್ಲಿಯೇ ಗೌರವಾನ್ವಿತನೂ ಸೇರಿಕೊಂಡಿದ್ದಾನೆ.

ಸಾ	ಮಾ	ನ್ಯ

೪.ತಿಂಡಿಯೊಂದೇ ಸಾಕಾದರೂ ಅದರ ಜೊತೆಗೇ ಅಂಟಿಕೊಂಡಿರುವ ಇದರ ಕೆಲಸವೇನು ?

ತಿ	ನಿ	ಸು

೫. ಹಿರಿಯ ಸಹೋದರಿಯ ಜೊತೆಗೇ ನೆರಹೊರೆಯವರೂ ಇದ್ದಾರೆ.

ಅ	ಕ್ಕ	ಪ	ಕ್ಕ

೬. ಬೃಹತ್ತಾಗಿ ಬೆಳೆದಿರುವ ವೃಕ್ಷ.

ಹೆ	ಮ್ಮ	ರ

ಉತ್ತರ: ಬಿಸಿಲ ಬೇಗೆಗೆ ಬಳಲಿ, ತಂಪಾದ ಹಾದಿಬದಿಯ ನೆರಳಲ್ಲಿ ವಿರಮಿಸಿಕೊಳ್ಳುವಾಗ ನೆನಪಾದ ಅಕ್ಕ?

ಸಾ	ಲು	ಮ	ರ	ದ	ತಿ	ಮ್ಮ	ಕ್ಕ

ರಂಗೋಲಿ ಬುಕ್

ನಿಮ್ಮ ರಂಗೋಲಿ ಇಲ್ಲಿ ಕಾಣಬೇಕೇ? ಇ-ಮೇಲ್ ಮಾಡಿ: horanadachilume@gmail.com
ಮತ್ತಷ್ಟು ರಂಗುರಂಗಿನ ರಂಗೋಲಿ ಮುಂದಿನ ಸಂಚಿಕೆಯಲ್ಲಿ

ರಂಗವಲ್ಲಿ

ಭಾರತೀಯ ಸಂಸ್ಕೃತಿಯಲ್ಲಿ, ನಿಯಮಪ್ರಕಾರ ಮಾಡುವ ಅನೇಕ ಕಾರ್ಯಗಳಲ್ಲಿ ರಂಗೋಲಿ ಬಿಡಿಸುವುದೂ ಒಂದು. ಸಾಮಾನ್ಯವಾಗಿ ಮನೆಯ ಹೆಣ್ಣು ಮಕ್ಕಳು ತಮ್ಮ ದೈನಂದಿನ ಚಟುವಟಿಕೆಯ ಒಂದು ಅಂಗವಾಗಿ ರಂಗೋಲಿ ಹಾಕುವುದನ್ನು ರೂಡಿಸಿಕೊಂಡಿರುತ್ತಾರೆ. ಮನೆಯ ಮುಂದೆ ರಂಗೋಲಿ ಇದ್ದರೆ ಅದೆಷ್ಟು ಲಕ್ಷಣ!

ಕೇವಲ ಸಂಸ್ಕೃತಿ ಅಷ್ಟೇ ಅಲ್ಲದೆ, ರಂಗೋಲಿ ಬಿಡಿಸುವುದರಿಂದ, ರೇಖಾ ಗಣಿತ ಉತ್ತಮಪಡಿಸಿಕೊಳ್ಳುವಲ್ಲಿ ಸಹಕಾರಿ. ಅದೆಷ್ಟು ಚುಕ್ಕಿಗಳು, ಎಂತೆಂತಹ ರೇಖೆಗಳು, ತರಹಾವರಿ ನಮೂನೆಗಳು. ಅಬ್ಬ! ರಂಗೋಲಿ ನಿಮಗೆ ಬೆರಗು ಮಾಡಿಲ್ಲವೇ? ಒಮ್ಮೆ ರಂಗೋಲಿಯಲ್ಲಿ ಕೈ ಆಡಿಸಿ ನೋಡಿ, ಒಂದು ಕಾವ್ಯವೇ ಹುಟ್ಟೀತು ... ▪



ರಚನೆ: ಪುಷ್ಪವಲ್ಲಿ ಚಂದ್ರಶೇಖರ್, ಕೆಂಗೇರಿ ಉಪನಗರ & ದಿವ್ಯಶ್ರೀ.ಡಿ, ಕೆ.ಜಿ.ಎಫ್.
ಮೇಲೆ ಮತ್ತು ಕೆಳಗೆ: 6ಚುಕ್ಕಿ-5ಸರ್ತಿ, ಮಧ್ಯ:16ಚುಕ್ಕಿ-6ಸರ್ತಿ

ಭಾಗ ೨ - ಪುಟಗಳಿಂದ ಪರದೆಗೆ

ಆರಂಭದಲ್ಲಿ ಪುಸ್ತಕದ ಪುಟವೂ ಶೂನ್ಯ, ಬೆಳ್ಳಿ ತೆರೆಯ ಪರದೆಯೂ ಶೂನ್ಯ. ನಂತರದಲ್ಲಿ ಪುಸ್ತಕದ ಪುಟಗಳಲ್ಲಿ ಕಾದಂಬರಿಕಾರರ ಲಹರಿಯು ಹರಿದು ಕಪ್ಪು ಬಿಳುಪಿನ ಅಕ್ಷರ ಲೋಕವು ತೆರೆದು, ಓದುಗರ ಮನದಾಳದಲ್ಲಿಳಿದು, ಅವರ ಭಾವನೆಗಳಿಗನುಗುಣವಾಗಿ ಕಲ್ಪನಾ ಸಾಮ್ರಾಜ್ಯ ಕಟ್ಟುತ್ತಾರೆ. ಅವರ ಕಲ್ಪನಾ ಸಮ್ರಾಜ್ಯಕ್ಕೆ ಸೇತುವೆ ಕಟ್ಟಿ, ಪುಸ್ತಕದ ಪುಟಗಳಲ್ಲಿನ ಕಪ್ಪುಬಿಳುಪಿನ ಸಾಹಿತ್ಯ ಮಾಧ್ಯಮಕ್ಕೆ ಜೀವತುಂಬಿ, ಅದನ್ನು ದೃಶ್ಯಕಾವ್ಯವನ್ನಾಗಿ ಪರಿವರ್ತಿಸಿ, ಕಾದಂಬರಿಯ ಸೊಗಡನ್ನು ಸೆರೆಹಿಡಿದು ಅದಕ್ಕೆ ಸಂಗೀತದ ಸಾರವನ್ನೂ ಸೇರಿಸಿ ಉಣಬಡಿಸುವ ಬಹುರೂಪಿಯಾದ ಪ್ರಬಲ ಮಾಧ್ಯಮ, ಚಲನಚಿತ್ರವನ್ನಾಗಿ ಪರಿವರ್ತಿಸಿ, ಬೆಳ್ಳಿ ತೆರೆಯಮೇಲೆ ಬಿಂಬಿಸಿದಾಗ ಹೊಸದೊಂದೇ ಲೋಕದ ಸೃಷ್ಟಿ.

ಕಾದಂಬರಿಕಾರ ಮೂಲ ಉದ್ದೇಶಕ್ಕೆ ಧಕ್ಕೆ ಬಾರದಂತೆ ಬೆಳ್ಳಿಪರದೆಗೆ ಅದನ್ನು ಅಳವಡಿಸಬೇಕು. ಸಮಯದ ಮಿತಿಯಿರುವುದರಿಂದ, ಮೂಲ ಕಥೆಯನ್ನು ಚಿತ್ರಕಥೆಯನ್ನಾಗಿ ಪರಿವರ್ತಿಸಬೇಕು. ಕಥೆಗೆ ತಕ್ಕ ಪರಿಸರವನ್ನು ಅರಸಬೇಕು, ಪಾತ್ರಗಳನ್ನು ಪಕ್ವವಾಗಿ ಪೋಷಿಸುವ ನಟನಟಿಯರು ಬೇಕು. ಇನ್ನು ಜನರ ಮೆಚ್ಚಿಸಲು ಸಂಗಿತ ಬೇಕಷ್ಟೇ ಅಲ್ಲ ಅದೂ ಕಥೆಯ ಹಂದರಕ್ಕೆ ಹೊಂದಬೇಕು, ಹೀಗೆ ಅನೇಕ ಬೇಡಿಕೆಗಳ ಹೊಂದಿಸಿಕೊಂಡು ಕತೆಯನ್ನು ಪರದೆಗೆ ತಂದು, ಯಶಸ್ವಿಯಾಗುವುದು ಸುಲಭದ ಕೆಲಸವೇನಲ್ಲ. ಆ ನಿಟ್ಟಿನಲ್ಲಿ ನೋಡಿದರೆ ಕನ್ನಡ ಚಿತ್ರರಂಗ ಸಾಕಷ್ಟೇ ಅದೃಷ್ಟಶಾಲಿಯೆನ್ನಬೇಕು. ಏಕೆಂದರೆ ಅದನ್ನೆಲ್ಲಾ ತೂಗಿಸಬಲ್ಲ ಅನೇಕ ಪ್ರತಿಭಾವಂತ ನಿರ್ದೇಶಕರಿದ್ದರು ನಮ್ಮಲ್ಲಿ. ಆದರೆ..

ನಿರ್ದೇಶಕರಷ್ಟೇ ಅಲ್ಲದೆ ಹಲವಾರು ನಟನಟಿಯರೂ ಆ ಕಥೆಗಳಲ್ಲಿನ ಪಾತ್ರಗಳಿಗೆ ಉಸಿರಾಗಿ ಚಿರಕಾಲ ನೆನೆಪಿನಲ್ಲಿ ಉಳಿಯುವಂತಹ ಅಭಿನಯ ನೀಡಿರುವುದಷ್ಟೇ ಅಲ್ಲದೆ, ಆ ಕಾದಂಬರಿಗಳ ಪಾತ್ರಗಳೇ ಸ್ವತಹ ತೆರೆಯ ಮೇಲೆ ಬಂದಂತ ಅನುಭವ ನೀಡಿದ್ದಾರೆ.



ನಾಗರಹಾವು ಚಿತ್ರದ ಚಾಮಯ್ಯ ಮೇಷ್ಟರಾಗಿ ಕೆ.ಎಸ್.ಅಶ್ವತ್ಥ್, ಬೂತಯನ ಮಗ ಅಯ್ಯು ವಿನ ಬೂತಯ್ಯ ಪಾತ್ರದ ಎಂ.ಪಿ.ಶಂಕರ್, ಗೆಜ್ಜೆಪೂಜೆಯ ಚಂದ್ರ, ಶರಪಂಜರದ ಕಾವೇರಿಯಾಗಿ ಎಂದೆಂದಿಗೂ ಜನಮನದಲ್ಲಿ ಉಳಿಯುವ ಪ್ರವಾಹದಂತೆ ಭೋರ್ಗರೆದ ಕಲ್ಪನಾ, ಬಂಗಾರದ ಮನುಷ್ಯನಾಗಿ ಡಾ.ರಾಜ್ ಕುಮಾರ್, ಬಂಧನದ ಭಗ್ನಪ್ರೇಮಿ ಹರೀಶ್, ನಾಗರ ಹಾವಿನ ರಾಮಾಚಾರಿಯಾಗಿ ಡಾ.ವಿಷ್ಣುವರ್ಧನ್, ಧರ್ಮಸೆರೆ, ಉಪಾಸನೆ, ರಂಗನಾಯಕಿಗಳ ಆರತಿ, ಗೆಂಡೆತಿಮ್ಮ , ಭುಜಂಗಯ್ಯ ಮತ್ತು ಅಯ್ಯುವಾಗಿ ಲೋಕೇಶ್, ತರಾಸುರವರ ಕಾದಂಬರಿಯ ಪಾತ್ರಗಳಿಗೆ ಜೀವತುಂಬುವ ಜೋಡಿಗಳಾಗಿ ಅನಂತಾನಾಗ್ ಲಕ್ಷ್ಮಿ, ಚಂದವಳ್ಳಿಯ ತೋಟ, ಮಿಸ್.ಲೀಲಾವತಿ, ಎಡಕಲ್ಲು ಗುಡ್ಡದ ಮೇಲೆ ಚಿತ್ರದ ಜಯಂತಿ, ಚಕ್ರತೀರ್ಥ ಚಂದವಳ್ಳೀಯ ತೋಟಗಳ ಉದಯಕುಮಾರ್, ಹೀಗೆ ಖ್ಯಾತ ನಟನಟಿಯರ ಅಭಿನಯ ಕಾದಂಬರಿ, ಚಲನಚಿತ್ರ ಎರಡಕ್ಕೂ ಕೀರ್ತಿ ತಂದಿರುವುದಷ್ಟೇ ಅಲ್ಲ, ಎಂದೆಂದಿಗೂ ಮಾಸದಂತಹ ನೆನಪನ್ನು ಉಳಿಸಿದೆ.

ಮುಂದಿನ ಪುಟ ನೋಡಿ ...

ಕಾದಂಬರಿಗಳಿಂದ ಚಲನಚಿತ್ರಗಳಲ್ಲಿ ಪ್ರಾದೇಶಿಕ ಸೊಗಡೂ ಬೆರೆತು, ಅಲ್ಲಿನ ಸೌಂದರ್ಯ, ಭಾಷೆ, ಜೀವನಶೈಲಿಯನ್ನು, ತೆರೆಯಮೇಲೆ ಬಿಂಬಿಸಿತು. ಇದು ಜನಸಾಮಾನ್ಯರು ಆ ಪ್ರದೇಶಗಳತ್ತ ಆಸಕ್ತಿ ವಹಿಸಲು ಕಾರಣವಾಯಿತು. ಈ ವಿಷಯದಲ್ಲಿ ಮತ್ತೆ ಪುಟ್ಟಣ್ಣಕಣಗಾಲ್ ಎಲ್ಲರನ್ನೂ ಮೀರಿಸಿ ನಿಲ್ಲುತ್ತಾರೆ. ಅವರು ತಮ್ಮ ಪ್ರತಿಯೊಂದು ಚಿತ್ರಗಳಲ್ಲಿಯೂ ಕನ್ನಡನಾಡಿನ ಸೌಂದರ್ಯವನ್ನು ಕತೆಗಳಿಗನುಗುಣವಾಗಿ ಸೆರೆಹಿಡಿದರು. ಚಿತ್ರದುರ್ಗ, ಕೊಡಗು, ಬಿಜಾಪುರ, ಬಳ್ಳಾರಿ, ಶಿವಗಂಗೆ, ಮಲೆನಾಡಿನ ಅನೇಕ ಪ್ರದೇಶಗಳು, ಅಷ್ಟೇ ಏಕೆ ಕನ್ಯಾಕುಮಾರಿ, ಮೌಂಟ್ ಅಬುಗಳಲ್ಲೂ ಚಿತ್ರೀಕರಿಸಿ ಕತೆಗಳಿಗೆ ನ್ಯಾಯ ಸಲ್ಲಿಸಿದರು. ಇನ್ನು ತರಾಸು, ಬಿ.ಎಲ್. ವೇಣು ಕಾದಂಬರಿಗಳಿಂದ ಚಿತ್ರದುರ್ಗವು ಬೆಳ್ಳಿತೆರೆಯನ್ನಲಂಕರಿಸಿದರೆ, ಎಂ.ಕೆ ಇಂದಿರಾ, ಕುವೆಂಪು, ನಾ.ಡಿಸೋಜ, ಕಾರಂತರ ಕಾದಂಬರಿಗಳಿಂದ ಮಲೆನಾಡ ಚೆಲುವು, ಬಾಷೆಗಳ ಅನಾವರಣವಾಯಿತು. ಭಾರತೀಸುತರ ಹುಲಿಯಹಾಲಿನಮೇವು, ಗಿರಿಕನ್ಯೆ, ಬಯಲುದಾರಿ ಮುಂತಾದವು ನಮ್ಮನ್ನು ಕೊಡಗಿಗೇ ಕೊಂಡೊಯ್ದವು.

ಇಡೀ ಭಾರತೀಯ ಚಿತ್ರರಂಗದಲ್ಲಿ ತಯಾರಾದ ಕಾದಂಬರಿ ಆಧಾರಿತ ಚಿತ್ರಗಳ ಸಂಖ್ಯೆಯಲ್ಲಿ, ನಮ್ಮ ಕನ್ನಡ ಚಿತ್ರರಂಗವೇ ಮೊದಲ ಸ್ಥಾನದಲ್ಲಿ ಬರಬಹುದೇನೋ ಎನಿಸುತ್ತದೆ. ಅಷ್ಟೇ ಅಲ್ಲ ಹೊಸಅಲೆಯ ಚಿತ್ರಗಳು ಆರಂಭವಾಗಲೂ ಕನ್ನಡ ಕಾದಂಬರಿಗಳೇ ಮುನ್ನುಡಿ ಬರೆದವು. ಘಟಶ್ರಾದ್ಧ, ಸಂಸ್ಕಾರ, ವಂಶವೃಕ್ಷ, ಕಾಡು, ಮೊದಲಾದ ಚಿತ್ರಗಳು, ಇಡಿ ದೇಶದ ಗಮನವನ್ನು ಕನ್ನಡದೆಡೆಗೆ ಸೆಳೆಯಿತು. ಈ ಪ್ರಾಕಾರದ ಚಿತ್ರಗಳಲ್ಲಿ ಮೇಲುಗೈ ಸಾಧಿಸಿದ್ದ, ಹಿಂದಿ, ಮಲಯಾಳಂ, ಬೆಂಗಾಲಿಯಂತಹ ಭಾಷೆಗಳೊಡನೆ ರಾಷ್ಟ್ರಪ್ರಶಸ್ತಿಗಳ ಪಡೆಯುವಲ್ಲಿ ಪೈಪೋಟಿ ನಡೆಸಿತು.

ಸುಮಾರು ೧೯೭೦- ೧೯೮೦ ರ ದಶಕಗಳ ಸಮಯ ಕಾದಂಬರಿಯಾಧಾರಿತ ಚಿತ್ರಗಳ ಯುಗವಾಗಿತ್ತು. ವ್ಯಾಪಾರೀ ಸಾಮಾಜಿಕ ಸೂತ್ರಗಳೇ ಅಲ್ಲದೆ, ಹೊಸಅಲೆಯ ಪ್ರವಾಹವೂ ಸೇರಿಕೊಂಡು ಆ ಸಮಯವನ್ನು ಕನ್ನಡ ಚಿತ್ರರಂಗದ ಸುವರ್ಣ ಯುಗವನ್ನಾಗಿಸಿತ್ತು. ಕನ್ನಡ ಚಿತ್ರರಂಗದ ಕೀರ್ತಿ ಪತಾಕೆ ವಿಶ್ವದ ಗಮನವನ್ನೇ ತನ್ನೆಡೆಗೆ ಸೆಳೆದಿತ್ತು. ಇದರಲ್ಲಿ ಕನ್ನಡದ ಕಾದಂಬರಿಗಳ ಕೊಡುಗೆ ಪ್ರಮುಖ ಪಾತ್ರ ವಹಿಸಿತ್ತು. ▪

ನೀವು ಮಾಡಿ

ಮೇಲ್ಮೈ ಎಳೆತ (Surface Tension)

ಸಂಗ್ರಹ: ಬದರಿ ತ್ಯಾಮಗೊಂಡ್ಲು

ನೀರಿನ ಮೇಲೆ ಅನೇಕ ಕೀಟಗಳು ನಡೆದಾಡಿಕೊಂಡು ಹೋಗುವುದನ್ನು ನೀವು ನೋಡಿರಬಹುದು. ಇದೇನು ಇವೆಕ್ಕೇನಾದರೂ ವರ ಕೊಟ್ಟಿರುವನೋ ಆ ಭಗವಂತ ಅಂದ್ಕೋಬೇಡಿ. ಇದರ ಹಿಂದಿನ ವಿಜ್ಞಾನ ತಿಳಿಯಲು ಈ ಪ್ರಯೋಗ ಮಾಡೋಣ ಬನ್ನಿ.

ಬೇಕಾಗುವ ಸಾಮಗ್ರಿ

- ಪೇಪರ್ ಕ್ಲಿಪ್, ಒಂದು ಟಿಶ್ಯೂ ಪೇಪರ್, ನೀರು ತುಂಬಿದ ಒಂದು ಲೋಟ, ಚೂಪಾದ ಪೆನ್ಸಿಲ್

ವಿಧಾನ

ನೀರಿನ ಮೇಲೆ ಪೇಪರ್ ಕ್ಲಿಪ್ ತೇಲಿಸಲು ಪ್ರಯತ್ನಪಡಿ. ಆಗುವುದಿಲ್ಲ. ಅದು ಮುಳುಗುವುದು.

ಹೀಗೆ ಮಾಡಿ: ಒಂದು ಟಿಶ್ಯೂ ಪೇಪರ್ ತುಂಡನ್ನು ನೀರಿನ ಮೇಲೆ ತೇಲಿಸಿ. ಬೇಗನೆ ಅದರ ಮೇಲೆ ಪೇಪರ್ ಕ್ಲಿಪ್ ಇಡಿ. ಟಿಶ್ಯೂ ನೆನೆದಂತೆ, ನಿಧಾನವಾಗಿ ಪೆನ್ಸಿಲ್ಲಿನ ಚೂಪು ತುದಿಯಿಂದ ಟಿಶ್ಯೂವನ್ನು ನೀರಿನೊಳಕ್ಕೆ ತಳ್ಳಿ (ಪೇಪರ್ ಕ್ಲಿಪ್ ಅನ್ನು ಮುಟ್ಟದಂತೆ ಎಚ್ಚರವಹಿಸಿ). ಎಲ್ಲವೂ ಸರಿ ಹೋದರೆ ಪೇಪರ್ ಕ್ಲಿಪ್ ತೇಲುವುದು. (ಹಲವು ಬಾರಿ ಈ ಪ್ರಯತ್ನ ಮಾಡಬೇಕಾಗಬಹುದು)

ಏನಾಗುತ್ತಿದೆ

ಎಲ್ಲಾ ದ್ರವಗಳಿಗೂ ಮೇಲ್ಮೈ ಎಳೆತ (Surface Tension) ಇರುತ್ತದೆ. ಇದೊಂದು ತರಹ ನೀರಿನ ಚರ್ಮ ಅನ್ನಬಹುದು. ನೀರಿನ ಕಣಗಳು ಒಂದಕ್ಕೊಂದು ಬೆಸೆದುಕೊಂಡಿರುತ್ತದೆ. ಒಂದು ನಿರ್ದಿಷ್ಟ ಪ್ರಮಾಣದ ಒತ್ತಡವನ್ನು ಸಹಿಸಿಕೊಳ್ಳುವುದಕ್ಕೆ ಶಕ್ಯವಾಗಿರುತ್ತದೆ. ಹೀಗಾಗಿ ತೆಳುವಾದ ವಸ್ತುಗಳು ತೇಲುತ್ತವೆ. ▪

ಜಾಣ ಕರ್ನಾಟಕ – ಉತ್ತರ

೧. ಶಿವಗಂಗೆ ಬೆಟ್ಟ. ಉತ್ತರದಿಂದ ನೋಡಿದರೆ ಸರ್ಪದಂತೆಯೂ, ದಕ್ಷಿಣದಿಂದ ಗಣೇಶನಂತೆಯೂ, ಪೂರ್ವದಿಂದ ನಂದಿಯಂತೆಯೂ, ಪಶ್ಚಿಮದಿಂದ ಲಿಂಗದಂತೆಯೂ ಕಾಣುತ್ತದೆ.

೨. ಹೊಯ್ಸಳ ವಂಶದ ನಾಟ್ಯರಾಣಿ ಶಾಂತಲೆಯು ಶಿವಗಂಗೆಯ ತುತ್ತ ತುದಿಯಿಂದ ಆತ್ಮಾಹುತಿ ಮಾಡಿಕೊಂಡಳು. ಆ ಜಾಗವು ಶಾಂತಲಾ ಡ್ರಾಪ್ ಎಂದೇ ಚಿರಪರಿಚಿತ.

ಅಲ್ಲಲ್ಲಿ ಏನೇನು

ನಿಮ್ಮ ಕಾರ್ಯಕ್ರಮವಿದ್ದರೆ ತಿಳಿಸಿ - horanadachilume@gmail.com

ಭಾರತದ ಗಣತಂತ್ರ ದಿವಸ

Thu, January 26, 9:00am – 10:30am

Level 2, Consulate General of India, 265 Castlereagh street, Sydney, 2000

ನಿಮ್ಮ ಕಾರ್ಯಕ್ರಮದ ವಿವರ ತಿಳಿಸಿ

HORANADACHILUME@GMAIL.COM

ಈ ಸಂಚಿಕೆಯನ್ನು ನಿಮಗಾಗಿ ತಂದವರು – ಸುಗಮ ಕನ್ನಡ ಕೂಟ – ಸಿಡ್ನಿ, ಆಸ್ಟ್ರೇಲಿಯಾ

ವಿನ್ಯಾಸ ಮತ್ತು ಮುಖ್ಯ ಸಂಪಾದಕರು – ಬದರಿ ತ್ಯಾಮಗೊಂಡ್ಲು ~ ಸಂಕಲನ – ವೀಣಾ ಸುದರ್ಶನ್, ರಾಜಲಕ್ಷ್ಮಿ ನಾರಾಯಣ

ಸಲಹಾ ಸಮಿತಿ –ಕನಕಾಪುರ ನಾರಾಯಣ, ನಾಗೇಂದ್ರ ಅನಂತಮೂರ್ತಿ

ಸೂಚನೆ: ಈ ಸಂಚಿಕೆಯಲ್ಲಿ ಪ್ರಕಟವಾಗಿರುವ ಎಲ್ಲ ವಿಷಯಗಳು ವಿವಿಧ ಲೇಖಕರ ಅನಿಸಿಕೆಗಳು. ಯಾವುದೇ ಅನಾನುಕೂಲವಾದಲ್ಲಿ "ಸುಗಮ ಕನ್ನಡ ಕೂಟ" ಅಥವಾ ಅದಕ್ಕೆ ಸಂಬಂಧಿಸಿದ ವ್ಯಕ್ತಿಗಳು ಜವಾಬ್ದಾರರಲ್ಲ. ಈ ಸಂಚಿಕೆಯಲ್ಲಿ ಪ್ರಕಟವಾದ ಎಲ್ಲ ಸುದ್ದಿ ಮಾಹಿತಿ, ಚಿತ್ರಗಳ ಹಕ್ಕುಗಳು ಸ್ಪಷ್ಟವಾಗಿ ಉಲ್ಲೇಖಿಸಿರದಿದ್ದರೆ ಅದು ಸುಗಮ ಕನ್ನಡ ಕೂಟಕ್ಕೆ ಸೇರಿದೆ.

ಸಂಚಿಕೆಯಲ್ಲಿ ಬಳಸಿದ ಹಲವು ಚಿತ್ರಗಳು ಅಂತರ್ಜಾಲದಿಂದ ಪಡೆದದ್ದು. ಅದರ ಎಲ್ಲ ಹಕ್ಕೂ ಅದರದರ ಕರ್ತೃಗಳಿಗೆ ಸೇರಿದ್ದು.